Mr. SPEAKER.—That is true, but the questions yet to be answered are not less than 85 to 90. I have brought this to the notice of the Government.

ಶ್ರೀ ಎಚ್. ಕೆ. ವೀರಣ್ಣಗೌಡರು (ಮದ್ದೂರು).—ಈಗ ಪ್ರಶ್ನೋತ್ತರಕಾಲ ಮುಗಿಯಲು ಇನ್ನೂ ಅರ್ಧ ಗಂಟೆ ಇರುತ್ತೆ. ಹಿಂದೆ, ಸರ್ಕಾರದವರ ಉತ್ತರ ಸಕಾಲಕ್ಕೆ ಬಾರದೆಇದ್ದು ಚರ್ಚೆಗೆ ತೆಗೆದುಕೊಳ್ಳದೆ ಹಾಗೆ ಕೈಬಿಟ್ಟದ್ದಂಥ ಪ್ರಶ್ನೆಗಳನ್ನು ಅವಕಾಶವಿದ್ದರೆ ಪುನಃ ಚರ್ಚೆಗೆ ತೆಗೆದುಕೊಳ್ಳುವಂಥ ಒಂದು ಅವಕಾಶ ವಿತ್ತು. ಈಗಲೂ ತಾವು ಆರೀತಿ ಮಾಡತಕ್ಕದ್ದು ಸೂಕ್ತವೆಂದು ಕಂಡುಬಂದರೆ, ಅಧ್ಯಕ್ಷರು ಹಾಗೆ ಮಾಡಬಹುದು.

Mr. SPEAKER.—Does the Hon'ble Member mean that during the last session it was so done?

Sri H. K. VEERANNA GOWDH.—No; during this session on the previous day some of the questions have not been answered or answers for the same were not ready. The answers might be available now and such questions may be taken up now.

Mr. SPEAKER.—There is no provision in the rules. Of course, I know some questions are left out on the first and second days, but there is no provision to take them up for answers on subsequent days.

ಶ್ರೀ ಎಸ್. ಗೋಪಾಲಗೌಡರು (ಸಾಗರ-ಹೊಸನಗರ).—ಸ್ವಾಮಿ, ಇದುವರೆಗೂ ಸರ್ಕಾರದವರು ಸದಸ್ಯರು ಕಳುಹಿಸಿರತಕ್ಕ ಪ್ರಶ್ನೆಗಳಿಗೆ ಒದಗಿಸಿರತಕ್ಕ ಉತ್ತರಗಳನ್ನು ನೋಡಿದರೆ ಅವು ಅಷ್ಟು ಸಮಾಧಾನಕರವಾದ ಉತ್ತರಗಳೆಂದು ಭಾವಿಸುವಹಾಗೆ ಇರುವುದ್ದಿಲ್ಲ. ಆದ್ದರಿಂದ ಸಾಧ್ಯವಾದಷ್ಟು ಅವರು ಒದಗಿಸತಕ್ಕ ಉತ್ತರಗಳು ಸಮಾಧಾನಕರವಾದ ರೀತಿಯಲ್ಲಿರುವಂತೆ ಎಷ್ಟುಸಾಧ್ಯವೋ ಅಷ್ಟನ್ನಾದರೂ ಮಾಡುವಂತೆ ತಾವು ಅವರಿಗೆ ಒಂದು ಸೂಚನೆ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

Sri A. G. RAMACHANDRA RAO.—Characterising the answers is not in good taste. Further to say that it must be convincing, is not right. We are not here to convince; we are here to give full information.

ಶ್ರೀ ಜಿ. ಪಾಪಣ್ಣನವರು (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).—ಆಯಾ ದಿನದ ಪ್ರಶ್ನೆಗಳಮೇಲೆ ಇನ್ನೂ ಹೆಚ್ಚು ಉಪಪ್ರಶ್ನೆಗಳನ್ನು ಹಾಕುವುದಕ್ಕೆ ತಾವು ಅವಕಾಶಕೊಟ್ಟರೆ ಚೆನ್ನಾಗಿರುತ್ತೆಂದು ನನ್ನಆಸೆ.

Announcement of the result of election to the House Committee.

Mr. SPEAKER.—The Chair desires to announce that in connection with the election to the House Committee, as the number of candidates is equal to the number to be elected, the following candidates are declared elected and there will be no voting to-day:

Sriyuths—

1. B. V. Narayana Reddy
2. M. Chikkalingiah
3. Muddu Ramiah
4. V. R. Naidu
4. R. Muniswamiah and
6. D. R. Kari Gowda

Janab J. MOHAMED IMAM (Jagalur).—I must point out one thing in this connection. During this session we have set up a very healthy tradition and convention in respect of the elections. So far, all elections, and very important elections, except perhaps the election of the Speaker and the Deputy Speaker have taken place without any contest and all the Members have been returned unopposed. This is a very healthy convention and tradition which has to be kept up in future.

Sri A. G. RAMACHANDRA RAO (Minister for Education).—I also wish to submit to the House this: When compared with our sister Legislatures, the way in which this House is moving on both sides is really good; it has been in very good order and I hope the same relations will always continue.

Mr. SPEAKER.—It is really very pleasing. Now Demands.

BUDGET FOR 1952-53—DEMANDS FOR GRANTS—*Contd.*

SECOND STAGE—*Contd.*

Demand No. 37—Working Expenses—Irrigation Works.

XVII. WORKS FOR WHICH CAPITAL ACCOUNTS ARE KEPT.

Mr. SPEAKER.—Motion moved:

"That a sum not exceeding Rs. 18,69,500 be granted to the Government to complete the sum necessary to defray the charges which will come in course of payment during the year ending

31st day of March 1953, in respect of 'I.N.E. and D. Works for which capital accounts are kept—Working Expenses'."

Under different heads, these cut motions are proposed to be moved: Serial Nos. 1, 2, 6, 7, 8, 10, 11, 13, 17, 21, 22, 23, 25, 26, 28, 29, 30, 31, 32, 33, 34, 35, 36, 39, 42, 43, 44, 47 and 49.

ಶ್ರೀ ಆರ್. ಅನಂತರಾಮ್ಅವರು (ಚಾಮರಾಜಪೇಟೆ).—ಖೋತಾಸೂಚನೆಗಳ ವಿಚಾರದಲ್ಲಿ ಒಂದು ಸಲಹೆಮಾಡಬೇಕೆಂದಿದ್ದೇನೆ. ನಿನ್ನೆ ದಿವಸ ಖೋತಾ ಸೂಚನೆ ಮಂಡಿಸಲು ಅಂಥಾದ್ದನ್ನು ತಂದವರಿಗೆ ಮಾತನಾಡಲು ಅವಕಾಶಕೊಟ್ಟಿತ್ತು. ಇತರರು ಮಾತನಾಡಲು ಅವಕಾಶವಿರಲಿಲ್ಲ. ಈ ದಿವಸ ಯಾರದಾದರೂ ಖೋತಾಸೂಚನೆ ತೆಗೆದುಕೊಳ್ಳದಿದ್ದರೆ ಅಂಥವರಿಗೆ ಮತ್ತು ನಿನ್ನೆ ಮಾತನಾಡದಿರುವವರಿಗೆ ಅವಕಾಶ ಕೊಡಬೇಕು, ಒಬ್ಬರೇ ಮಾತನಾಡಬಾರದು ಎಂದು ಸೂಚಿಸುತ್ತೇನೆ.

Sri S. SRINIVASA IYENGAR (T.-Narsipur).—It is a different head we are discussing today.

Janab J. MOHAMED IMAM (Jagalur).—I suggest that all of us desist from moving our cut motions and proceed to discuss on the demands.

Mr. SPEAKER.—Provided all agree.

Sri A. BHEEMAPPA NAIK (Molakalmuru).—There was a difficulty yesterday. We were able to get answers to our cut motions relating to particular matters over which we had some grievances. That will not be the case if a general debate takes place, as is now suggested. No member will yield under five minutes or thereabouts. Then, the Ministers will not be able to give answers point by point. In the other case, the grievances are directly brought to the notice of the Minister who will take note of them. That is convenient. So if we discuss matters general, we will never know what view the Government will hold regarding our grievances. Therefore it will not be of any use.

ಶ್ರೀ ಬಿ. ರಾಚಯ್ಯನವರು (ಎಳಂದೂರು—ಅನುಸೂಚಿತ ಜಾತಿಗಳು).—ಖೋತಾ ಸೂಚನೆಯನ್ನು ವಿರೋಧಿಸುವವರಿಗಾದರೂ ಅವಕಾಶಕೊಡಬೇಕು.

Mr. SPEAKER.—What procedure does the Leader of the Opposition propose?

Janab J. MOHAMED IMAM.—The Chair can adopt yesterday's procedure.

ಶ್ರೀ ಎಚ್. ಹುಚ್ಚಮಾಸ್ತಿಗೌಡರು (ಹುಲಿಯೂರುದುರ್ಗ).—ಈ ದಿವಸ 25 ಖೋತಾಸೂಚನೆಗಳಿದ್ದರೂ ನಿನ್ನೆಯ ದಿವಸ ಅನುಸರಿಸಿದ ನೀತಿಯನ್ನನುಸರಿಸಿದರೆ ಎಲ್ಲಾ ಖೋತಾಸೂಚನೆಗಳ ಮೇಲೂ ಮಾತನಾಡುವುದಕ್ಕೆ ಅವಕಾಶ ಸಿಕ್ಕುತ್ತದೆ, ಎಲ್ಲಾ ಡಿಮ್ಯಾಂಡುಗಳನ್ನೂ ಮುಗಿಸಬಹುದು ಎಂದು ಸಲಹೆ ಕೊಡುತ್ತೇನೆ.

ಶ್ರೀ ಕೆ. ವಿ. ಶಂಕರಗೌಡರು (ಮಂಡ್ಯ).—ನಾಲ್ಕನೆಯ ಖೋತಾಸೂಚನೆ ಬಹಳ ಮುಖ್ಯವಾದುದು. ದಯವಿಟ್ಟು ಅದನ್ನು ಮಂಡಿಸುವುದಕ್ಕೆ ಅವಕಾಶಕೊಡಬೇಕು.

Mr. SPEAKER.—It is not selected. The agreed list is here. I have no objection to include it, if the House has no objection. So far as discussion is concerned, we will take up the cut motions. The only thing is the concerned Minister will have to exert himself by this procedure.

System of Collecting water rate from lands under Visvesvaraya Canal.

Sri B. P. NAGARAJA MURTHY (Malvalli).—Sir, I move:—

"That the demand under the head 'XVIII. N. E. and D. Works for which Capital Accounts are kept—Working Expenses' for Rs. 18,69,500 be reduced by Rs. 100 (to raise a discussion on the system of collecting water rate indiscriminately from the lands under the Visvesvaraya Canal)."

ಮಾನ್ಯ ಅಧ್ಯಕ್ಷರೇ, ನೀರು ಸರದಿ ತೆರಿಗೆ ಸಂಬಂಧದಲ್ಲಿ ಜಮೀನುಗಳಿಗೆ ನೀರನ್ನೊದಗಿಸುವ ಪ್ರಮಾಣವನ್ನು ಮತ್ತು ನೀರು ಸರದಿ ತೆರಿಗೆ ವಿಧಿಸುವ ಪದ್ಧತಿಯನ್ನು ಮಾನ್ಯ ಸಚಿವರ ಮತ್ತು ಸಭೆಯ ಗಮನಕ್ಕೆ ತರಬೇಕೆಂದು ಈ ಖೋತಾಸೂಚನೆಯನ್ನು ತಂದಿದ್ದೇನೆ. ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿರುವ ಎಲ್ಲಾ ಜಮೀನುಗಳಿಗೂ ಒಂದೇ ಪ್ರಮಾಣದಲ್ಲಿ ನೀರನ್ನು ಕೊಡುವ ಪದ್ಧತಿಯಿಲ್ಲ. ಒಂದೊಂದು ಜಮೀನಿಗೆ ಒಂದೊಂದು ಪ್ರಮಾಣದಲ್ಲಿ ನೀರು ಒದಗಿಸಿ ನೀರು ಸರದಿಗನುಗುಣವಾಗಿ ಇಂಥ ಬೆಳೆ ಬೆಳೆಯಬೇಕೆಂಬ ಒಂದು ಪದ್ಧತಿ ಮೊದಲಿನಿಂದಲೂ ಜಾರಿಯಲ್ಲಿದೆ. ಕೆಲವು ಜಮೀನುಗಳಲ್ಲಿ ಕಬ್ಬು ಬೆಳೆಯುತ್ತಾರೆ, ಕೆಲವು ಕಡೆ ಬತ್ತ ಬೆಳೆಯುತ್ತಾರೆ, ಇನ್ನು ಕೆಲವು ಜಮೀನುಗಳಲ್ಲಿ ತಿಂಗಳಿಗೆ ಎರಡು ಸಲ ನೀರು ಕೊಟ್ಟು ಕೆಲವು ಖುಷ್ಕಿ ಫಸಲು ಬೆಳೆಯಲು ಅವಕಾಶವಿದೆ. ಆದರೆ ಈ ರೀತಿಯಾಗಿ ನೀರು ಒದಗಿಸುವ ಪ್ರಮಾಣದಲ್ಲಿ ವ್ಯತ್ಯಾಸವಿದ್ದರೂ ತೆರಿಗೆಯನ್ನು ಮಾತ್ರ ಒಂದೇ ವಿಧದಲ್ಲಿ ಮೊದಲಿನಿಂದ ವಸೂಲುಮಾಡುತ್ತಿದ್ದಾರೆ. ಕಬ್ಬನ್ನು ಬೆಳೆಯುವ ಜಮೀನಿಗೆ ಹತ್ತು ರೂಪಾಯಿಗಳು, ಬತ್ತ ಬೆಳೆಯುವಾಗ ಕೇವಲ ಆರು ತಿಂಗಳು ನೀರು ಕೊಟ್ಟರೂ ಅದೇ ಪ್ರಮಾಣದಲ್ಲಿ ತೆರಿಗೆ ತೆಗೆದುಕೊಳ್ಳುತ್ತಿದ್ದಾರೆ ಮತ್ತು ತಿಂಗಳಿಗೆ ಎರಡು ಸಾರಿ ನೀರು ಒದಗಿಸುವ, ಅದೂ ಮಳೆಯಿಲ್ಲದೇ ಇರುವ ಸಂದರ್ಭದಲ್ಲಿ ನೀರನ್ನು ಆ ರೀತಿ ಕೊಡುವ ಜಮೀನಿಗೂ ಕಬ್ಬು, ಬತ್ತ ಬೆಳೆಯುವ

(SRI B. P. NAGARAJA MURTHY)

ಜಮೀನಿಗೆ ವಸೂಲುಮಾಡುವಂತೆ 10 ರೂಪಾಯಿಗಳ ತೆರಿಗೆಯನ್ನು ವಸೂಲುಮಾಡುತ್ತಿದ್ದಾರೆ. ಅದು ಒಂದು ಸರಿಯಾದ ಕ್ರಮವಲ್ಲ. ಏಕೆಂದರೆ ಕಬ್ಬು ಬೆಳೆಯುವ ಜಮೀನಿನಲ್ಲಿ ಬರುವ ಉತ್ಪತ್ತಿ, ಬತ್ತ ಬೆಳೆಯುವ ಕಡೆ ಬರುವ ಉತ್ಪತ್ತಿ ಮತ್ತು ಖುಷ್ಕಿ ಫಸಲನ್ನು ತೆಗೆಯುವ ಜಮೀನಿನ ಉತ್ಪತ್ತಿ ಮತ್ತು ನೀರನ್ನು ಒದಗಿಸುವ ಪ್ರಮಾಣ—ಇವುಗಳಲ್ಲಿ ವ್ಯತ್ಯಾಸವಿರುವುದರಿಂದ ಎಲ್ಲಕ್ಕೂ ಒಂದೇ ಸಮನಾದ ನೀರು ಸರದಿ ತೆರಿಗೆ ವಿಧಿಸುವುದು ನ್ಯಾಯಸಮ್ಮತವಾಗಿಲ್ಲ. ಈ ಮೂರು ಸಂದರ್ಭಗಳನ್ನು ಬಿಟ್ಟರೂ, ನಾಲ್ಕನೆಯ ಸಂದರ್ಭದಲ್ಲಿ ಮನ ನೋಯುವ ಪರಿಸ್ಥಿತಿ ವಿಶ್ವೇಶ್ವರಯ್ಯ ನಾಲಾ ಕೆಳಗೆ ಇದೆ. ಅಂಥ ನಾಲಾ ಕೆಳಗಿರುವ ಕೆಲವು ಜಮೀನುಗಳಿಗೆ ನೀರೇ ಬರುವುದಿಲ್ಲ. ನಾಲಾ ತೆಗೆದು ಕೆಲಸ ಪೂರೈಸಿತೆಂದು ವರದಿ ಬಂದಕೂಡಲೆ ಸೆಮಿ ಡ್ರೈ ಬ್ಲಾಕು ಮಾಡಿ, ಕೇವಲ ಒಂದೆರಡು ತಿಂಗಳು ನೀರು ಬಿಟ್ಟು, ನೀರು ಸರದಿ ತೆರಿಗೆ ಕೊಡಬೇಕೆಂದು ಡಿಮ್ಯಾಂಡ್ ಬಂದ ಕೂಡಲೆ ಪುನಃ ನೀರನ್ನು ಒದಗಿಸದಿದ್ದರೂ ತೆರಿಗೆ ವಸೂಲು ಮಾಡುತ್ತಿದ್ದಾರೆ. ಇದು ನಿಜವಾಗಿಯೂ ಬಹಳ ಹೃದಯವಿದ್ರಾವಕವಾಗಿದೆ. ಮಾನ್ಯ ಮಂತ್ರಿಗಳು ಕೂಡ ಅದನ್ನು ನೋಡಿರಬಹುದು. ಕೆಲವು ಪ್ರದೇಶಗಳಲ್ಲಿ ಅಂಥ ಕಡೆ ಕೇವಲ ಮೂರು ಸಂದರ್ಭಗಳಲ್ಲಿ ಮಾತ್ರ ನೀರನ್ನು ನೋಡಿದ್ದಾರೆ. ಯಾವಾಗ ಎಂದರೆ, ನಾಲೆ ತೋಡುವುದಕ್ಕೆ ಕೂಲಿಗಾರರು ಕೆಲಸ ಮಾಡುವಾಗ ಕಷ್ಟದಿಂದ ಅವರು ಬೆವರು ಸುರಿಸಿ ನಾಲ್ಕು ಹನಿ ಬಿದ್ದಿರಬಹುದು; ಎರಡನೆಯ ಸಂದರ್ಭ ನಾಲೆ ಯಾವ ಜಮೀನು ಮೇಲೆ ಹೋಯಿತೋ ಆ ಜಮೀನು ಅಕ್ವೈರ್ ಆದಾಗ ಜಮೀನು ಕಳೆದುಕೊಂಡ ಆ ಜಮೀನ್‌ದಾರರಿಂದ ಕಣ್ಣೀರು ಅಲ್ಲಿ ಬಿದ್ದಿರಬಹುದು; ಮೂರನೆಯ ಸಂದರ್ಭ, ಮಳೆಯಾದಾಗ ನಾಲ್ಕಾರು ಹನಿ ಬಿದ್ದಿರಬಹುದು; ಅಷ್ಟೇ. ಕೃಷ್ಣರಾಜ ಸಾಗರದಿಂದ ಖಂಡಿತ ನೀರು ಅಲ್ಲಿಗೆ ಹೋಗಿಲ್ಲ. ಅಂಥ ಪ್ರದೇಶದಲ್ಲಿ ವಿವೇಚನೆಯಿಲ್ಲದೆ ತೆರಿಗೆ ವಸೂಲುಮಾಡಿ ರೈತರಿಗೆ ಕಿರುಕುಳ ಕೊಡುವುದು ನಿಜವಾಗಿಯೂ ನ್ಯಾಯಸಮ್ಮತವಲ್ಲ. ಆ ಕಡೆ ನಾಲಾ ಹೋದಾಗ ಜಮೀನು ಕಳೆದುಕೊಂಡವರಿಗೆ ಜಮೀನೂ ಹೋಯಿತು.........

Mr. SPEAKER.—In which taluk?

Sri B. P. NAGARAJA MURTHY.—Malavalli Taluk.

Mr. SPEAKER.—Has not temporary reduction been given from 1948 to the extent of 42½ thousands?

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು.—ಇನ್ನೂ ಕೆಲವುಕಡೆ ಕೊಟ್ಟಿಲ್ಲ. ಕೊಟ್ಟಿರುವುದೂ ಕೂಡ ಎಷ್ಟೋ ಕಡೆ ಸಾಲದು. ಈ ನಾಲೆ ಕೆಳಗಿರುವ ರೈತರು ಕೆಲವರಿಗೆ ನೀರು ಸರಬರಾಯಿ ಸರಿಯಾಗಿ ಆಗದಿದ್ದರೂ ಅವರು ತೆರಿಗೆ ದಂಡವಾಗಿ ಕೊಡಬೇಕಾಗಿದೆ. ಆದ್ದರಿಂದ ಸರ್ಕಾರದವರು ಇದನ್ನು ಗಮನಿಸಿ ನೀರು ಯಾವ ಪ್ರಮಾಣದಲ್ಲ ಒದಗಿಸುತ್ತಾರೋ ಅದಕ್ಕನುಸಾರವಾಗಿ ತೆರಿಗೆಯನ್ನು ವಿಧಾಯಕ ಮಾಡಿದರೆ ನೀರಿನ ಸೌಕರ್ಯವಿಲ್ಲದಿರುವ ಎಷ್ಟೋ ರೈತರಿಗೆ ಕಡಮೆಯಾಗುತ್ತದೆ ಎಂಬುದನ್ನು ಸರ್ಕಾರದ ಗಮನಕ್ಕೆ ತರುವುದಕ್ಕಾಗಿ ಈ ಖೋತಾ ನಿರ್ಣಯವನ್ನು ಮಂಡಿಸುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಕಡಿದಾಳ್ ಮಂಜಪ್ಪನವರು (ರೆವಿನ್ಯೂ ಮತ್ತು ಪಬ್ಲಿಕ್ ವರ್ಕ್ಸ್ ಶಾಖೆಗಳ ಮಂತ್ರಿಗಳು).—ಅಧ್ಯಕ್ಷರೇ, ವಿಶ್ವೇಶ್ವರಯ್ಯ ನಾಲಾ ಕೆಳಗೆ ಸರ್ಕಾರದವರು ವಿವೇಚನೆಯಿಲ್ಲದೆ ನೀರಿನ ತೆರಿಗೆಯನ್ನು ವಸೂಲು ಮಾಡುತ್ತಾರೆಂಬ ಆರೋಪಣೆ ಈ ಕತ್ತರಿ ನಿರ್ಣಯದಲ್ಲಿ ಅಡಕವಾಗಿದೆ. ವಿವೇಚನೆಯಿಲ್ಲದೆ ನೀರು ತೆರಿಗೆ ವಸೂಲುಮಾಡುತ್ತಿಲ್ಲ. ನೀರು ತೆರಿಗೆಯನ್ನು ನಿರ್ದಿಷ್ಟವಾಗಿ ಸರ್ಕಾರದ ನಿಯಮದ ಪ್ರಕಾರ ಮತ್ತು ಸರ್ಕಾರಿ ಆಜ್ಞೆಗಳ ಪ್ರಕಾರ ವಸೂಲುಮಾಡುತ್ತಿದ್ದಾರೆ.

ಮಾನ್ಯ ಸದಸ್ಯರಾದ ಶ್ರೀಮಾನ್ ನಾಗರಾಜಮೂರ್ತಿಯವರು, ಬಿಡತಕ್ಕ ನೀರಿನ ಪ್ರಮಾಣದ ಮೇಲೆ ತೆರಿಗೆಯನ್ನು ವಸೂಲುಮಾಡಬೇಕು ಎಂಬ ಉದ್ದೇಶವನ್ನು ಮುಂದೆ ಇಟ್ಟಿದ್ದಾರೆ. ಆದರೆ ವ್ಯವಸಾಯಕ್ಕೆ ನೀರನ್ನು ಒದಗಿಸಬೇಕಾದರೆ ಮೀಟರ್ ಇಟ್ಟು ಅದರ ಆಧಾರದ ಮೇಲೆ ತೆರಿಗೆಯನ್ನು ವಸೂಲು ಮಾಡುವುದು ಕಷ್ಟ. ಕೆಲವು ಕಡೆ ನೀರು ಸರಿಯಾಗಿ ಸರಬರಾಯಿ ಅಗುತ್ತಾ ಇಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಆ ಪ್ರದೇಶದ ಕೂಲಿಯವರ ಕಣ್ಣೀರು, ಬೆವರು ಅಥವಾ ಜಮೀನ್‌ದಾರರ ಕಣ್ಣೀರು ಮಳೆ ಹನಿಯಾಗಿ ಉದುರುತ್ತಾ ಇತ್ತು, ನೀರೇ ಇಲ್ಲ ಎಂದು ಹೇಳುವುದು ಬಹಳ ಉತ್ಪ್ರೇಕ್ಷೆಯಿಂದ ಕೂಡಿದ ವಾದ ಎಂದು ಮನವಿ ಮಾಡಿಕೊಳ್ಳುತ್ತೇನೆ. ಅಂಥಾ ಪ್ರದೇಶಕ್ಕೆ ರಿಯಾಯಿತಿ ಕೊಡಬೇಕೆಂಬ ಉದ್ದೇಶದಿಂದ ಸರ್ಕಾರದವರು ಈಗಾಗಲೆ 42 ಸಾವಿರ ರೂಪಾಯಿ ರಿಯಾಯಿತಿ ಕೊಟ್ಟಿದ್ದಾರೆ. ಆ ಒಂದು ಅಂಶವನ್ನು ಅಧ್ಯಕ್ಷರು ಈಗ ತಾನೆ ಹೇಳಿದ್ದಾರೆ.

Mr. SPEAKER.—Though it is not my function to say that.

ಶ್ರೀ ಕಡಿದಾಳ್ ಮಂಜಪ್ಪನವರು.—ಎಲ್ಲೆಲ್ಲಿ ಬಹಳ ತೊಂದರೆ ಇದೆಯೋ ಅವರಿಗೆ ರಿಯಾಯಿತಿ ಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಪಡುತ್ತಾರೆ ಎಂದು ಭರವಸೆ ಕೊಡುತ್ತೇನೆ.

Sri B. P. NAGARAJA MURTHY.—I press the cut motion, Sir.

Mr. SPEAKER.—The question is—

"That the demand be reduced by Rs. 100."

The motion was negatived.

Mr. SPEAKER.—The second cut motion may be taken up under Demand No. 40. That is the proper place for it.

Giving effect to the report of the Krishnaraja Sagara Ad-hoc Committee.

Sri H. K. VEERANNA GOWDH (Maddur).—Sir, I move:

"That the demand under the head 'XVII. I. N. E. and D. Works for which Capital Accounts are

kept—Working Expenses' for Rs. 18,69,500 be reduced by Rs. 100 (to urge upon the Government the necessity of giving effect to the Report of the Krishnaraja Sagara *Ad-hoc* Committee constituted in Government Order No. P. W. 7462-71-K. R. S. 11-50-24, dated 24th December 1950 ')."

ಸ್ವಾಮಿ, ಈ ಖೋತಾ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತಾ ಕೆಲವು ಅಂಶಗಳನ್ನು ಸರ್ಕಾರದ ಮತ್ತು ಸಭೆಯವರ ಗಮನಕ್ಕೆ ತರುವುದು ಅಗತ್ಯ ಎಂದು ಭಾವಿಸಿದ್ದೇನೆ. ಯಾವ ಅಡ್‌ಹಾಕ್ ಸಮಿತಿ ವರದಿಯನ್ನು ಜಾರಿಗೆ ಕೊಡಬೇಕೆಂದು ಒತ್ತಾಯ ಪಡಿಸಿದ್ದೇನೆಯೋ ಅದಕ್ಕೆ ಸಂಬಂಧಪಟ್ಟ ಹಿನ್ನೆಲೆ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳುವುದು ಅಗತ್ಯವಾದ್ದರಿಂದ 5 ನಿಮಿಷಕ್ಕಿಂತ ಒಂದೆರಡು ನಿಮಿಷ ಹೆಚ್ಚಾದರೂ ಅವಕಾಶ ಕೊಡಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ.

Mr. SPEAKER.—All right.

An Hon'ble MEMBER.—ಅದೇ ರೀತಿ ಇತರರಿಗೂ ಅವಕಾಶ ಕೊಡಬೇಕು.

Mr. SPEAKER.—It depends upon the nature of the cut motion.

ಶ್ರೀ ಎಚ್. ಕೆ. ವೀರಣ್ಣಗೌಡರು.—ಕೃಷ್ಣರಾಜಸಾಗರ ಅಡ್‌ಹಾಕ್ ಸಮಿತಿ ಎನ್ನುವುದು ಯಾವ ಉದ್ದೇಶದಿಂದ ನೇಮಕವಾಯಿತು ಎಂಬ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ವಿಶ್ವೇಶ್ವರಯ್ಯನಾಲಾ ಪ್ರಾರಂಭವಾಗಿ ಆ ಪ್ರಾಂತ ನೀರಾವರಿಗೆ ಅನುಕೂಲವಾದಮೇಲೆ ಅಲ್ಲಿ ಅನೇಕ ವಿಧವಾದ ಸಮಸ್ಯೆಗಳು ಉದ್ಭವಿಸಿದುವು. ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ಸಮಸ್ಯೆಗಳುಂಟಾದುವೊ ಅವು ಅವುಗಳ ಪರಿಹಾರಾರ್ಥವಾಗಿ ಸರ್ಕಾರದವರು ಆಗಿಂದಾಗ್ಗೆ ಒಂದೊಂದು ಸಮಿತಿಯನ್ನು ನೇಮಕಮಾಡುತ್ತಾ ಬಂದರು. ಹೀಗೆ 1927ನೇ ಇಸವಿಯಿಂದ ಇದುವರೆಗೂ ಅನೇಕ ಸಮಿತಿಗಳು ಆ ಪ್ರಾಂತದಲ್ಲಿ ಬೇರೆ ಬೇರೆ ಉದ್ದೇಶಕ್ಕಾಗಿ ನೇಮಕವಾಗಿವೆ. ಆ ಪೈಕಿ ಕೆಲವು ಸಮಿತಿಗಳು ಕಾರ್ಯ ಪೂರೈಸಿದಮೇಲೆ ವಜಾ ಆಗಿವೆ. ಇನ್ನೂ ಅನೇಕ ಸಮಿತಿಗಳು ಅಲ್ಲಿ ಕೆಲಸಮಾಡುತ್ತಾ ಇವೆ. ಉದಾಹರಣೆಗೆ ಮೊದಲನೆಯದಾಗಿ ಕೃಷ್ಣರಾಜಸಾಗರ ವರ್ಕಿಂಗ್ ಕಮಿಟಿ ಎಂಬ ಒಂದು ಸಮಿತಿ ಇದೆ. ಅದಕ್ಕೆ ಪಿ. ಡಬ್ಲ್ಯು. ಡಿ. ಮಿನಿಸ್ಟರು ಅಧ್ಯಕ್ಷರಾಗಿದ್ದಾರೆ ಮತ್ತು ವ್ಯವಸಾಯದ ಇಲಾಖೆ, ಇಂಜನಿಯರಿಂಗ್ ಇಲಾಖೆ, ಆರೋಗ್ಯ ಇಲಾಖೆ ಈ ರೀತಿ ಕೆಲವು ಇಲಾಖೆಗಳ ಮುಖ್ಯಾಧಿಕಾರಿಗಳು ಸದಸ್ಯರಾಗಿದ್ದಾರೆ. ಆ ಪ್ರಾಂತದ ಖಾಸಗಿ ಜನರೂ ಕೂಡ ಆ ಸಮಿತಿಯ ಸದಸ್ಯರಾಗಿದ್ದಾರೆ. ಈ ಸಮಿತಿಯವರು ವರ್ಷಕ್ಕೆ ಸಾಮಾನ್ಯವಾಗಿ ಎರಡು ಸಾರಿ ಸೇರಿ ಆ ಪ್ರಾಂತದಲ್ಲಿ ಆಗಬೇಕಾದ ಮತ್ತು ಆಗಿರಬಹುದಾದ ಕಾರ್ಯಕಲಾಪಗಳನ್ನು ವಿಮರ್ಶೆಮಾಡುತ್ತಾರೆ. ಈ ಸಮಿತಿಯ ಅಂಗವಾಗಿ ಹೆಲ್ತ್ ಕಮಿಟಿ ಎಂದೂ ಡೆವಲಪ್‌ಮೆಂಟ್ ಕಮಿಟಿ ಎಂದೂ ಎರಡು ಉಪಸಮಿತಿಗಳಿವೆ. ಇವೆರಡು ಉಪಸಮಿತಿಗಳ ಕಾರ್ಯಕಲಾಪಗಳನ್ನೂ ಕೆ. ಆರ್. ಎಸ್. ವರ್ಕಿಂಗ್ ಕಮಿಟಿಯು 6 ತಿಂಗಳಿಗೆ ಒಂದುಸಾರಿ ಸೇರಿ ವಿಮರ್ಶೆಮಾಡಿ ಅವುಗಳು ಮಾಡಿರತಕ್ಕ ಶಿಫಾರಸುಗಳನ್ನು ಅಂಗೀಕರಿಸುತ್ತದೆ. ಕೆ. ಆರ್. ಎಸ್. ವರ್ಕಿಂಗ್ ಕಮಿಟಿಗೆ ಮಾನ್ಯ ಮಂತ್ರಿಗಳು ಅಧ್ಯಕ್ಷರಾಗಿದ್ದರೂ ಆ ಸಮಿತಿ ಮಾಡಿದ ನಿರ್ಧಾರ ಸರ್ಕಾರದ ಮೇಲೆ ಬೈಂಡಿಂಗ್ ಆಗಿಲ್ಲ. ಅದು ಕೇವಲ ಸಲಹಾ ರೂಪದ ಸಮಿತಿಯಾಗಿದೆ. ಈಚೆಗೆ ಅಲ್ಲಿ ಕಬ್ಬಿನಮೇಲೆ ಸೆಸ್ ಹಾಕಿದಾಗ ಸರ್ಕಾರ ಬಂದು ಭರವಸೆ ಕೊಟ್ಟಿದೆ. ಸೆಸ್ ಹಾಕಕೂಡದು ಎಂದು ಪ್ರತಿನಿಧಿಗಳು ಹಿಂದಿನ ನ್ಯಾಯವಿಧಾಯಕ ಸಭೆಯಲ್ಲಿ ಸರ್ಕಾರದವರನ್ನು ಒತ್ತಾಯಪಡಿಸಿದಾಗ ಆ ಸೆಸ್ ಮೊಬಲಗನ್ನು ಒಂದು ಸ್ಪೆಷಲ್ ಫಂಡ್ ಆಗಿ ಮಾಡಿ ಅದನ್ನು ಆ ಪ್ರಾಂತದ ಜನರ ಅಭಿವೃದ್ಧಿಗಾಗಿ ಖರ್ಚುಮಾಡುತ್ತೇವೆ, ಮುಖ್ಯವಾಗಿ ಅಲ್ಲಿ ಸಂಚಾರ ಸೌಕರ್ಯ, ಆರೋಗ್ಯಾನುಕೂಲ ಇವುಗಳಿಗಾಗಿ ಖರ್ಚುಮಾಡಲಾಗುತ್ತದೆ ಎಂಬ ಭರವಸೆಯನ್ನು ಕೊಟ್ಟರು. ಮತ್ತು ಆ ಭರವಸೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಕಳೆದ ಶಾಸನ ಸಭೆಯಲ್ಲಿ ಹಿಂದೆ ಇದ್ದ ಕಾಂಗ್ರೆಸ್ ಸರ್ಕಾರವನ್ನು ಆ ಪ್ರಾಂತದ ಪ್ರತಿನಿಧಿಗಳು ಒತ್ತಾಯಪಡಿಸಿದಮೇಲೆ, ಒಂದು ಸಮಿತಿ ನೇಮಕವಾಯಿತು. ಆ ಸಮಿತಿಯ ಕೆಲಸ ಕಾರ್ಯಗಳೇನೆಂಬುದೂ ವಿಧಾಯಕವಾಗಿದೆ. ಸಂಚಾರ ಸೌಕರ್ಯ, ಆರೋಗ್ಯ ಇತ್ಯಾದಿ ಕಾರಣಗಳಿಗಾಗಿ ಷುಗರ್‌ಕೇನ್ ಸೆಸ್ ಫಂಡಿನ ಹಣವನ್ನು ಯಾವ ರೀತಿ ಖರ್ಚುಮಾಡಬೇಕೆಂಬ ಬಗ್ಗೆ ಆ ಸಮಿತಿ ಚರ್ಚೆಮಾಡಿ ತೀರ್ಮಾನ ಕೈಕೊಂಡಲ್ಲಿ ಆ ತೀರ್ಮಾನವನ್ನು ಸರ್ಕಾರದ ಒಪ್ಪಿಗೆಗೆ ಕಳುಹಿಸಬೇಕು. ಕೆ. ಆರ್. ಎಸ್. ಹೆಲ್ತ್ ಕಮಿಟಿಯವರೂ ಸಹ ಆರೋಗ್ಯಾನುಕೂಲಗಳ ಬಗ್ಗೆ ಕೆಲಸಮಾಡುತ್ತಾರೆ. ಡೆವಲಪ್‌ಮೆಂಟ್ ಕಮಿಟಿಗೆ ಆ ಜಿಲ್ಲೆಯ ಡೆಪ್ಯುಟಿ ಕಮಿಷನರು ಅಧ್ಯಕ್ಷರಾಗಿದ್ದಾರೆ. ಅದು ರಸ್ತೆಗಳ ಕೆಲಸ ನೋಡಿಕೊಳ್ಳಬೇಕು. ಹೀಗೆ ಆ ಪ್ರಾಂತದಲ್ಲಿ ಮೂರು ನಾಲ್ಕು ಸಮಿತಿಗಳಿದ್ದು ಒಂದಕ್ಕಿರುವ ಕೆಲಸವೇ ಇನ್ನೊಂದಕ್ಕೂ ಇದ್ದು ಅವುಗಳೆಲ್ಲಕ್ಕೂ ಒಂದೇ ಉದ್ದೇಶವಿರುವುದರಿಂದ ಏನಾಗಿದೆ ಎಂದರೆ, ಒಂದು ವೇಳೆ ಯಾವುದಾದರೂ ಮುಖ್ಯವಾದ ವಿಚಾರ ಬಂದರೆ ಡೆವಲಪ್‌ಮೆಂಟ್ ಕಮಿಟಿಗೆ ಹೋಗಬೇಕು, ಹೆಲ್ತ್ ಕಮಿಟಿಗೆ ಹೋಗಬೇಕು, ಸೆಸ್ ಕಮಿಟಿಗೂ ಕೂಡ ಹೋಗಬೇಕು, ಕೊನೆಗೆ ಕೆ. ಆರ್. ಎಸ್. ವರ್ಕಿಂಗ್ ಕಮಿಟಿಗೆ ಹೋಗಬೇಕೆನ್ನುತ್ತಾ ಕಾಲಹರಣವಾಗುತ್ತಾ ಇದೆ. ಇವುಗಳಲ್ಲದೆ ಇನ್ನೂ ಒಂದು ಸಮಿತಿ ಇತ್ತು. ಈ ಸಮಿತಿಯನ್ನು ನೇಮಕಮಾಡಿದ ಉದ್ದೇಶವೇನೆಂದರೆ, ನನಗೆ ಮೊದಲು ಮಾತನಾಡಿದ ಶ್ರೀಮಾನ್ ನಾಗರಾಜಮೂರ್ತಿಯವರು ಸರ್ಕಾರದಮೇಲೆ ಮಾಡಿದಂಥ ಆರೋಪಣೆಯನ್ನು ಕುರಿತು ಚರ್ಚೆಮಾಡಿ ಸಲಹೆ ಕೊಡುವುದಕ್ಕಾಗಿ ಎಂದು ಹೇಳಬಯಸುತ್ತೇನೆ. ಶ್ರೀ ನಾಗರಾಜಮೂರ್ತಿಯವರು ಕಬ್ಬು ಬೆಳೆಯುವವರಿಂದ, ಬತ್ತ ಬೆಳೆಯುವವರಿಂದ, ಖುಷ್ಕಿ ಬೆಳೆ ಬೆಳೆಯುವವರಿಂದ ಎಲ್ಲರಿಂದಲೂ 10 ರೂಪಾಯಿ ಕಂದಾಯ ತೆಗೆದುಕೊಳ್ಳುತ್ತಾರೆ, ಇದು ಅನ್ಯಾಯ ಎಂದು ಹೇಳಿದರು. ಆ ರೀತಿ ಏಕೆ ತೆಗೆದುಕೊಳ್ಳುತ್ತಾರೆ ಎಂಬ ವಿಚಾರ ತಿಳಿದಿದ್ದರೆ ಅವರು ಹಾಗೆ ಹೇಳುತ್ತಾ ಇರಲಿಲ್ಲ. ವಿಶ್ವೇಶ್ವರಯ್ಯ ನಾಲಾ ಪ್ರಾರಂಭವಾದಾಗ ಸರ್ಕಾರದವರು ಆಲೋಚನೆಮಾಡಿ ಕಬ್ಬು ಬೆಳೆದರೆ 15 ರೂಪಾಯಿ, ಬತ್ತ ಬೆಳೆದರೆ 10 ರೂಪಾಯಿ, ಖುಷ್ಕಿ ಬೆಳೆ ಆದರೆ 5 ರೂಪಾಯಿ ಈ ರೀತಿ ಮೂರು ವರ್ಷಗಳಿಗೆ 15, 10; 5, ಮೂರೂ ಒಟ್ಟು ಸೇರಿ 30 ರೂಪಾಯಿಗಳಾಗುತ್ತವೆ. ಅಂದರೆ ಸರಾಸರಿ ವರ್ಷಕ್ಕೆ 10 ರೂಪಾಯಿನಂತೆ ಹಾಕಬಹುದು ಎಂದು ತೀರ್ಮಾನಿಸಿದರು. ಒಂದೇ ಜಮೀನಿನಲ್ಲಿ ಒಂದು ವರ್ಷ ಕಬ್ಬು,

(ಶ್ರೀ ಎಚ್. ಕೆ. ವೀರಣ್ಣಗೌಡರು)

ಒಂದು ವರ್ಷ ಬತ್ತ, ಇನ್ನೊಂದುವರ್ಷ ಖುಷ್ಕಿ ಬೆಳೆಯು ಬೇಕೆಂದು ಸರ್ಕಾರದವರು ಹೇಳಿದ್ದರು. ಅದೇ ಬ್ಲಾಕ್ ಸಿಸ್ಟಂ. ಬೇರೆ ಬೇರೆ ಬೆಳೆಗೆ ಬೇರೆ ಬೇರೆ ಕಂದಾಯ ವಿಧಿಸಿದ್ದರೂ ಮೂರು ವರ್ಷಕ್ಕೆ ಏನಾಗುತ್ತದೆ ಎಂಬುದನ್ನು ನೋಡಿಕೊಂಡು ಅದರ ಸರಾಸರಿಯನ್ನು ಪ್ರತಿ ವರ್ಷವೂ ವಸೂಲುಮಾಡುತ್ತಿದ್ದಾರೆ. ಪ್ರಾರಂಭದಿಂದಲೂ ಬ್ಲಾಕ್ ಸಿಸ್ಟಂ ಕಾರ್ಯಗತವಾಗಲಿಲ್ಲ. ಯಾರಿಗೂ ಕಬ್ಬು ಹಾಕಿದ ಮಾರನೆ ವರ್ಷ ಬತ್ತ, ಬತ್ತ ಹಾಕಿದ ಮಾರನೆ ವರ್ಷ ಖುಷ್ಕಿ ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ಬೇರೆ ಬೇರೆ ಕಾರಣಗಳಿವೆ. ಕಬ್ಬು ಬೆಳೆ ಪೂರ್ತಿಯಾಗಬೇಕಾದರೆ 15, 16, 18 ತಿಂಗಳು ಆಗುತ್ತದೆ. ಅದು ಕಟಾವು ಮುಗಿಯಬೇಕಾದರೆ ಬತ್ತ ಹಾಕುವುದಕ್ಕೆ ಕಾಲ ಮೀರಿರುತ್ತದೆ. ಹೀಗೆಲ್ಲಾ ಇದೆ. ತುಟ್ಟತುದಿಯಲ್ಲಿರತಕ್ಕ ಜಮೀನಿಗೆ ನೀರೇ ಸರಬರಾಯಿ ಆಗುವುದಿಲ್ಲ. ಹೀಗಿದ್ದರೂ ಕಂದಾಯ ಮಾತ್ರ ಒಂದೇ ರೀತಿ ಹಾಕುತ್ತೀರಿ ಎಂದು ಶ್ರೀ ನಾಗರಾಜಮೂರ್ತಿಯವರು ಹೇಳಿದರು. ಅದು ವಾಸ್ತವ. ಮಳವಳ್ಳಿ, ಟಿ. ನರಸೀಪುರ ಈ ಕಡೆ ಕೆಲವು ಜಮೀನುಗಳಲ್ಲಿ ಆ ರೀತಿ ಆಗುತ್ತಿದ್ದುದನ್ನು ಗಮನಕ್ಕೆ ತಂದಮೇಲೆ ಹಿಂದಿನ ಕಾಂಗ್ರೆಸ್ ಸರ್ಕಾರದವರು ಒಂದೇ ಸಮಿತಿಯನ್ನು ನೇಮಕಮಾಡಿದರು. ಆ ಸಮಿತಿಯವರು ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸಿದ್ದಾರೆ.

9-30 P. M.

ಆ ವರದಿಯಲ್ಲಿ ಅವರು ಅನೇಕ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಹೀಗೆ ಸರಾಸರಿ ಕಂದಾಯ ಹಾಕುವುದಕ್ಕೆ ಬದಲಾಗಿ, ಕಬ್ಬು ಬೆಳೆಯುವ ಪ್ರದೇಶವನ್ನು ನಿರ್ದಿಷ್ಟಮಾಡಿ ಅಲ್ಲಿ ಮಾತ್ರ ಕಬ್ಬು ಬೆಳೆಯುವುದು, ಬಾಕಿ ತಗ್ಗಾದ ಪ್ರದೇಶದಲ್ಲಿ ಕೆರೆ ಕೆಳಗಿನ ಜಮೀನುಗಳಂತೆ ಆರು ತಿಂಗಳು ಮಾತ್ರ ನೀರು ಕೊಟ್ಟು ಯಾವಾಗಲೂ ಬತ್ತ ಬೆಳೆಯಬೇಕೆಂದು ಸೂಚಿಸಿದ್ದಾರೆ. ಆ ಸಮಿತಿಯ ವರದಿಯಮೇಲೆ ಸರ್ಕಾರದವರು ತಮ್ಮ ಆರ್ಡರ್ ಮಾಡಿಲ್ಲ.

ಅಂತು ಮೂರು, ನಾಲ್ಕು ಸಮಿತಿಗಳು ಅಲ್ಲಿ ಕೆಲಸ ಮಾಡುತ್ತಿರುವುದರಿಂದ ಅವುಗಳ ಕಾರ್ಯ ಸುಸೂತ್ರವಾಗಿ ನಡೆಯುವುದಕ್ಕೆ ಅಡಚಣೆಯಾಗಿರುವುದರಿಂದ, ಆ ಕೆ. ಆರ್. ಎಸ್. ಸಮಿತಿಯಲ್ಲಿ ಆ ಪ್ರಾಂತದ ಸದಸ್ಯರು ಲಕ್ಷಾಂತರ ರೂಪಾಯಿಗಳ ಹಣ ಪ್ರತಿ ವರ್ಷವೂ ಕಬ್ಬಿನ ಸೆಸ್ಸಿನಿಂದ ಬರುತ್ತಿದೆ, ಈ ಹಣವನ್ನು ಖರ್ಚು ಮಾಡಬೇಕಾದರೆ ಶಿಫಾರಸ್ಸನ್ನು ಮಾಡಿ ಮೇಲಕ್ಕೆ ಕಳುಹಿಸಿ ಸರ್ಕಾರದಿಂದ ಅನುಜ್ಞೆ ಪಡೆದು ಮಾಡಬೇಕೆಂದರೆ ತುರ್ತಾಗಿ ಏನನ್ನೂ ಮಾಡುವುದು ಕಷ್ಟವಾಗುತ್ತದೆ, ಆದ್ದರಿಂದ ಒಂದು ಸ್ಟ್ಯಾಟ್ಯುಟರಿ ಬಾಡಿಯನ್ನು ಏರ್ಪಾಡುಮಾಡಿ ಅದಕ್ಕೆ powers of execution ಕೊಡಬೇಕೆಂದು ಒತ್ತಾಯಮಾಡಲಾಗಿ, ಆಗಿನ ಮಂತ್ರಿವರ್ಯರು, ಕೆ. ಆರ್. ಎಸ್. ವರ್ಕಿಂಗ್ ಕಮಿಟಿಯವರ ಸಲಹೆಯನ್ನು ಒಪ್ಪಿ ಒಂದು ಆಡ್ ಹಾಕ್ ಕಮಿಟಿಯನ್ನು ರೆವಿನ್ಯೂ ಕಮಿಷನರ್‌ರವರ ಅಧ್ಯಕ್ಷತೆಯಲ್ಲಿ ನೇಮಕಮಾಡಿದರು. ಆ ಕಮಿಟಿಯವರು ಹತ್ತಾರು ಮೀಟಿಂಗುಗಳನ್ನು ನಡೆಸಿ ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸಿದ್ದಾರೆ. ಆ ವರದಿ ಸರ್ಕಾರದ ಮುಂದೆ ಬಂದು ಆಗಲೇ ಕೆಲವು ತಿಂಗಳುಗಳಾದರೂ ಕೂಡ ಇದುವರೆಗೂ ಏನೂ ಕಾರ್ಯಕ್ರಮ ಕೈಕೊಂಡಿಲ್ಲ. ಆ ವರದಿಯಲ್ಲಿ ಏನು ಹೇಳಿದ್ದಾರೆಂದರೆ, ವಿಶ್ವೇಶ್ವರಯ್ಯ ಕೆನಾಲ್ ಏರಿಯ ಡೆವಲಪ್‌ಮೆಂಟ್ ಬೋರ್ಡ್ ಎಂದು ಒಂದು ಸ್ಟ್ಯಾಟ್ಯುಟರಿ ಬೋರ್ಡು ಸ್ಥಾಪನೆಯಾಗಬೇಕು; ಅದಕ್ಕೆ ಎಲ್ಲಾ powers of execution ಇರಬೇಕು, ಆದರೆ ಅದು ಮಾಡುವ ಖರ್ಚು ವೆಚ್ಚಗಳಿಗೆ ಕಡೆಯ ಅನುಮೋದನೆ ಸರ್ಕಾರದಿಂದ ದೊರೆಯಬೇಕು ಎಂದು, ಹೀಗೆ ಮುನಿಸಿಪಲ್ ಕಾರ್ಪೊರೇಷನ್ ಯಾವ ರೀತಿಯಲ್ಲಿದೆಯೋ ಆ ರೀತಿ ಆ ಪ್ರದೇಶಕ್ಕೆ ಅನ್ವಯಿಸುವಂತೆ ಒಂದು ಕಮಿಟಿಯನ್ನು ಸ್ಥಾಪನೆಮಾಡಬೇಕೆಂದು ಅವರು ಶಿಫಾರಸುಮಾಡಿದ್ದಾರೆ. ಅಷ್ಟೇ ಅಲ್ಲದೆ ಯಾವ ರೀತಿ ಒಂದು ಸ್ಟ್ಯಾಟ್ಯುಟರಿ ಬಾಡಿಯನ್ನು ಸ್ಥಾಪನೆಮಾಡಬೇಕೆಂಬ ಬಗ್ಗೆ ಒಂದು ಕರಡು ಮಸೂದಾ ಕಾನೂನನ್ನು ಕೂಡ ಆ ವರದಿಯಲ್ಲಿ ಅಡಕಮಾಡಿದ್ದಾರೆ. ಆ ವರದಿಯಲ್ಲಿ ಅಡಕವಾಗಿರುವ ಸಲಹೆಗಳನ್ನು ಅಂಗೀಕರಿಸಿ ಅದರಂತೆ ಕಾರ್ಯಕ್ರಮ ಕೈಕೊಳ್ಳುವುದಾದರೆ, ಆ ಪ್ರಾಂತದಲ್ಲಿ ಕಬ್ಬಿನ ಸೆಸ್ ಮೂಲಕ ಬರುವ ಹಣವನ್ನು ನ್ಯಾಯವಾಗಿ ತುರ್ತಾಗಿ ಖರ್ಚುಮಾಡುವುದಕ್ಕೆ ಆ ಜನರಿಗೆ ಅನುಕೂಲ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ಒಂದು ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ. ಈಗ 3—4 ಕಮಿಟಿಗಳಿದ್ದು, ಕೆಲವು ಮೂರು ತಿಂಗಳಿಗೊಮ್ಮೆ ಸೇರುವುದು, ಇನ್ನು ಕೆಲವು ನಾಲ್ಕು ತಿಂಗಳಿಗೊಮ್ಮೆ ಸೇರುವುದು, ಆ ಮೆಂಬರುಗಳಿಗೆಲ್ಲಾ ಭತ್ಯ ಕೊಡುವುದು, ಜೊತೆಗೆ ಕೆಲವು ಇಲಾಖಾ ಮುಖ್ಯಾಧಿಕಾರಿಗಳೂ ಅವುಗಳ ಸದಸ್ಯರಾಗಿರುವುದರಿಂದ, ಅವರೂ ಮೈಸೂರಿನಿಂದ ಬೆಂಗಳೂರಿನಿಂದ ಬರಬೇಕಾಗುತ್ತಾದ್ದರಿಂದ ಅವರ ಟಿ.ಎ., ಡಿ.ಎ.— ಇವುಗಳನ್ನೆಲ್ಲಾ ಲೆಕ್ಕ ಹಾಕಿಕೊಂಡರೆ ವಿಪರೀತ ಖರ್ಚಾಗುತ್ತದೆ. ಇದನ್ನು ತಪ್ಪಿಸಬೇಕಾದರೆ ಒಂದೇ ಒಂದು ಕಮಿಟಿ ನೇಮಕವಾಗಬೇಕು; ಅದಕ್ಕೆ ಹೆಚ್ಚಿಗೆ ಅಧಿಕಾರವಿರಬೇಕು; ಖರ್ಚುವೆಚ್ಚಗಳನ್ನು ಮಾಡುವ ಅಧಿಕಾರವನ್ನೂ ಅದಕ್ಕೆ ಕೊಡಬೇಕು. ಈಗ ವಿಶ್ವೇಶ್ವರಯ್ಯ ನಾಲಾ ಷುಗರ್‌ಕೇನ್ ಸೆಸ್ ಕಮಿಟಿಯವರು ತಾವು ಮೊದಲಿನಿಂದ ವಹಿಸಿರುವ ಕರ್ತವ್ಯಗಳ ಜೊತೆಗೆ ಸರ್ಕಾರದವರು ಹೆಚ್ಚಿಗೆ ಕೆಲವು ಕರ್ತವ್ಯಗಳನ್ನು ನೇಮಿಸುತ್ತಾ ಬಂದಿದ್ದಾರೆ. ಉದಾಹರಣೆಗೆ ಅಲ್ಲಿರುವ ನಾಲಾ ಸರ್ವಿಸ್ ರೋಡುಗಳ ರಿಪೇರಿಯನ್ನು ಮೊದಲು ಇಂಜಿನಿಯರಿಂಗ್ ಇಲಾಖೆಯವರು ಮಾಡುತ್ತಿದ್ದರು. ಇದು ಸುಮಾರು 300 ಮೈಲಿಯಷ್ಟಿದೆ. ಇದನ್ನು ಈಗ ಈ ಸೆಸ್ ಫಂಡ್ ಕಮಿಟಿಯವರೇ ಮಾಡಬೇಕೆಂದು ಹೇಳಿದ್ದಾರೆ. ಮೊದಲು ಎಷ್ಟು ಸಿಬ್ಬಂದಿಯಿತ್ತೋ ಈಗ ಇಷ್ಟು ಕೆಲಸ ಹೆಚ್ಚಿದಾಗಲೂ ಅಷ್ಟೇ ಇದ್ದಾರೆ. ಹಿಂದೆ ವರ್ಷೇ ವರ್ಷೇ ಬಡ್ಜೆಟ್ಟಿನಲ್ಲಿ ನಾಲಾ ಸರ್ವಿಸ್ ರೋಡುಗಳ ವ್ಯವಸ್ಥೆಗಾಗಿ ಹಣವನ್ನು ಒದಗಿಸುತ್ತಿದ್ದರು. ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಬೇರೆ ಬೇರೆ ಕೆಲಸಗಳಿಗೆ ಬಡ್ಜೆಟ್ ಹೆಡ್‌ಗಳಲ್ಲಿ ಒದಗಿಸಿರುವ ಹಣವನ್ನೆಲ್ಲಾ ಸೆಸ್ ಕಮಿಟಿಗೆ ವರ್ಗಾಯಿಸುವುದು ಅಗತ್ಯ. ಅಂಥಾದ್ದನ್ನೀಗ ಈ ಕಮಿಟಿಯವರು ಈ ಕೇನ್ ಸೆಸ್ ಫಂಡಿನಿಂದಲೇ ಮಾಡಬೇಕಾಗಿದೆ. ಈ ಅಂಶಗಳನ್ನೆಲ್ಲಾ ಈ ಆಡ್-ಹಾಕ್ ಸಮಿತಿಯವರು ಯೋಚನೆಮಾಡಿ ಕೇನ್ ಸೆಸ್ ಫಂಡಿನ ಜೊತೆಗೆ ಸರ್ಕಾರದವರು ಬಡ್ಜೆಟ್ಟಿನಲ್ಲಿ ಮಾಮೂಲಾಗಿ ಈ ಕೆಲಸಗಳಿಗಾಗಿ ಯಾವ ಯಾವ ಹಣವನ್ನೊದಗಿಸುತ್ತಿದ್ದರೋ ಆ ಹಣವನ್ನೂ ಈ ಕಮಿಟಿಗೇ ವಹಿಸಿಕೊಡಬೇಕೆಂದು ಹೇಳಿದ್ದಾರೆ.

ಈ ಪ್ರಕಾರ ಈ ಅಡ್‌-ಹಾಕ್ ಕಮಿಟಿಯವರು ಸಾವಧಾನವಾಗಿ ಆಲೋಚನೆಮಾಡಿ ಅನೇಕ ಉಪಯುಕ್ತವಾದ ಸಲಹೆಗಳನ್ನು ಒಂದು ವರದಿಯ ರೂಪದಲ್ಲಿ ಸರ್ಕಾರದವರ ಮುಂದಿಟ್ಟಿದ್ದಾರೆ. ಆ ವರದಿಯನ್ನು ಸರ್ಕಾರದವರು ಪರ್ಯಾಲೋಚನೆಮಾಡಿ ಈ ಸಭೆಯ ಮುಂದಿನ ಅಧಿವೇಶನದಲ್ಲಿ ಒಂದು ಮಸೂದೆಯಾಗಿ ತಂದು ಒಂದು ಸ್ಟ್ಯಾಚ್ಯುಟರಿ ಬಾಡಿಯನ್ನು ನೇಮಕಮಾಡಿ ಅಲ್ಲಿನ ಕೆಲಸಕಾರ್ಯಗಳು ಸುಸೂತ್ರವಾಗಿ ನಡೆಯುವಂತೆಯೂ ಮತ್ತು ಅಲ್ಲಿನ ಜನರಿಗೆ ಅನುಕೂಲವಾಗುವಂತೆಯೂ ಮಾಡುವುದು ಅವಶ್ಯಕ. ಈ ಅಂಶಗಳನ್ನು ಸರ್ಕಾರದವರ ಗಮನಕ್ಕೆ ತರುವುದಕ್ಕಾಗಿ ನಾನು ಖೋತಾ ನಿರ್ಣಯವನ್ನು ಸಭೆಯ ಮುಂದಿಟ್ಟಿದ್ದೇನೆ.

Mr. SPEAKER.—Cut motion moved:

'That the demand be reduced by Rs. 100.'

ಶ್ರೀ ಕಡಿದಾಳ್ ಮಂಜಪ್ಪನವರು.—ಒಂದು ಪ್ರದೇಶದಲ್ಲಿ ಆ ಪ್ರದೇಶಗಳಲ್ಲಿರತಕ್ಕ ಸಮಸ್ಯೆಗಳ ಪರಿಹಾರಕ್ಕಾಗಿ ನಾನಾ ಸಮಿತಿಗಳಿರುವುದು ಸೂಕ್ತವಲ್ಲವೆಂಬ ವಾದವನ್ನು ನಾನು ಒಪ್ಪುತ್ತೇನೆ. ಇದರಿಂದ ಅನೇಕ ತೊಂದರೆಗಳಾಗುತ್ತವೆ, ಜೊತೆಗೆ ಖರ್ಚೂ ಜಾಸ್ತಿಯಾಗುತ್ತದೆಂಬುದು ನಿಜ. ಈಗ ಈ ಆಡ್‌-ಆಕ್ ಸಮಿತಿಯ ವರದಿಯು ಸರ್ಕಾರದ ಮುಂದಿದೆ. ಇದನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ,

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—ಒಂದು ವಿಷಯ ತಿಳಿದುಕೊಳ್ಳಬೇಕಾಗಿದೆ. ಈ ಸೆಸ್ಸಿನ ಮೊಬಲಗು ಕಂಪೆನಿಯ ಮೂಲಕ ಬರುವುದರಿಂದ, ಈ ಮೊಬಲಗನ್ನು ಡಿಸ್ಟ್ರಿಕ್ಟ್ ಬೋರ್ಡಿಗೇ ಕೊಟ್ಟು ಏಕೆ ಅವರಿಂದ ಕೆಲಸ ಮಾಡಿಸಕೂಡದು?

Mr. SPEAKER.—They will consider that.

ಜನಾಬ್ ಜೆ. ಮಹಮ್ಮದ್ ಇಮಾಂರವರು (ಜಗಳೂರು).—ನಾನು ಒಂದು ವಿಷಯ ಕೇಳಬೇಕಾಗಿದೆ. ಆಡ್‌-ಹಾಕ್ ಸಮಿತಿಯ ವರದಿ ಬಂದು ಈಗ ಸುಮಾರು ಎರಡು ವರ್ಷಗಳ ಮೇಲಾಯಿತು. ಕೃಷ್ಣರಾಜಸಾಗರ..............

ಶ್ರೀ ಕಡಿದಾಳ್ ಮಂಜಪ್ಪನವರು.—ಇದು ಆ ಕಮಿಟಿಯಲ್ಲ. ಈ ಕಮಿಟಿಯೇ ಬೇರೆ.

ಜನಾಬ್ ಜೆ ಮಹಮ್ಮದ್ ಇಮಾಂರವರು.—ಆದರೂ ನನ್ನ ಸಲಹೆಯೇನೆಂದರೆ, ಇಂಥ ಮುಖ್ಯವಾದ ವರದಿಗಳು ಬಂದಾಗ ಅವುಗಳನ್ನು ಈ ಸಭೆಯ ಮುಂದಿಟ್ಟು ಮುಂದೆ ಏನೇನು ಕಾರ್ಯಕ್ರಮ ಕೈಕೊಳ್ಳಬೇಕೆಂಬ ಬಗ್ಗೆ ಈ ಸಭೆಯವರ ಅಭಿಪ್ರಾಯವನ್ನೂ ಪಡೆಯುವುದು ಒಳ್ಳೆಯದು. ಇದರಲ್ಲಿ ಕೆಲವರು ಬೋರ್ಡ್ ಆಗಬೇಕೆಂದು ಸೂಚಿಸಿದ್ದಾರೆ. ಅದು ಅವಶ್ಯಕವೇ ಅಲ್ಲವೇ ಅದರ ಸಾಧಕ ಬಾಧಕಗಳೇನು, ಏನು ಪ್ರಯೋಜನವಿರುತ್ತದೆ ಎಂಬುದನ್ನೆಲ್ಲಾ ತಿಳಿದುಕೊಳ್ಳಲನುಕೂಲವಾಗುವಂತೆ, ಒಂದು ಸಂಪ್ರದಾಯದ ಪ್ರಕಾರ, ಸಭೆಯ ಮುಂದಿಟ್ಟು ಮುಂದೇನು ಕಾರ್ಯಕ್ರಮ ಕೈಕೊಳ್ಳಬೇಕೆಂಬುದನ್ನು ಸಭೆಗೆ ಬಿಡುವುದು ಒಳ್ಳೆಯದು.

Sri Kadidal MANJAPPA.—I will consider the question of placing the report before this house.

Sri H. K. VEERANNA GOWDH.—I beg leave to withdraw my cut motion.

The cut motion was, by leave, withdrawn.

Mr. SPEAKER.—All the cut motions are over. Only the main demand remains. There is no need I think for discussion on the main demand also.

(*Some Members expressed their desire to speak on the main demand and the the discussion on the main demand proceeded.*)

ಶ್ರೀ ಪಿ. ಆರ್. ರಾಮಯ್ಯನವರು (ಬಸವನಗುಡಿ).—ಸ್ವಾಮಿ, ವಿಶ್ವೇಶ್ವರಯ್ಯ ನಾಲೆಯ ವಿಷಯ ಕೇವಲ ಆ ಜಿಲ್ಲೆಗೆ ಮತ್ತು ಅಲ್ಲಿನ ರೈತರಿಗೆ ಸಂಬಂಧಿಸಿದ್ದ ವಿಷಯವಲ್ಲ; ಅಖಿಲ ಮೈಸೂರು ಸಂಸ್ಥಾನಕ್ಕೆ ಸಂಬಂಧಪಟ್ಟ ವಿಷಯ ಅದು. ಏಕೆಂದರೆ ಆ ನಾಲೆಯ ರಚನೆಗಾಗಿ ಮತ್ತು ಕೃಷ್ಣರಾಜಸಾಗರದ ನಿರ್ಮಾಣಕ್ಕಾಗಿ ಅನೇಕ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಆ ನಾಲೆಯ ರಚನೆಯ ಕಾಲದಲ್ಲಿ ಯಾವ ಉದ್ದೇಶವನ್ನಿಟ್ಟುಕೊಂಡು ಅದನ್ನು ಮಾಡಿದ್ದೆವೋ ಆ ಉದ್ದೇಶ ಇನ್ನೂ ಪೂರ್ತಿಯಾಗಿ ಈಡೇರಿಲ್ಲ. ಆ ನಾಲೆಯ ಕೆಳಗಡೆ 1,20,000 ಎಕರೆಗಳು ಸಾಗುವಳಿಯಾಗತಕ್ಕದ್ದೆಂದು ವಿಧಿಸಿ, ಅದು ಸಾಗುವಳಿಯಾಗತಕ್ಕ ವಿಧಾನ ಯಾವ ರೀತಿಯಾಗಿರಬೇಕೆಂಬುದನ್ನು ಕೂಡ ಸರ್ ಎಂ. ವಿಶ್ವೇಶ್ವರಯ್ಯನವರು ತಮ್ಮ ವರದಿಯಲ್ಲಿ ನಮೂದಿಸಿದ್ದರು. ನಾಲೆಯ ಕೆಳಗಡೆ ಹರಿಯತಕ್ಕ ನೀರಿನ ಪ್ರಮಾಣವೆಷ್ಟಿರಬೇಕೆಂಬುದನ್ನೂ ಆ ವರದಿಯಲ್ಲಿ ತಿಳಿಸಿದ್ದರು......................

ಶ್ರೀ ಕಡಿದಾಳ್ ಮಂಜಪ್ಪನವರು.—ಆ ವರದಿ ಯಾವುದು?

ಶ್ರೀ ಪಿ. ಆರ್. ರಾಮಯ್ಯನವರು.—Original report when the canal was constructed.

ಆ ನಾಲೆಯನ್ನು ರಚಿಸಿದ ಕಾಲದಲ್ಲಿ ಹೀಗೆ ಅದರಿಂದ ಬರತಕ್ಕ ನೀರನ್ನು ಸರಿಯಾಗಿ ಮಿತವ್ಯಯದಿಂದ ಉಪಯೋಗಿಸಬೇಕೆಂದು ವಿಧಾಯಕ ಮಾಡಿದ್ದರು. ಆ ರೀತಿ ಮಿತವ್ಯಯದಿಂದ ನೀರನ್ನು ಉಪಯೋಗಿಸಬೇಕಾದರೆ ಬ್ಲಾಕ್ ಸಿಸ್ಟಂ ಪ್ರಕಾರ ವ್ಯವಸಾಯ ನಡೆಸಬೇಕೆಂದು ಹೇಳಿ, ಒಂದು ಬೆಳೆ ಕಬ್ಬು ಬೆಳೆದರೆ, ಇನ್ನೊಂದು ಸಾರಿ ಬತ್ತ ಬೆಳೆಯಬೇಕು, ಅದಾದಮೇಲೆ ಒಂದು ಖುಷ್ಕಿ ಬೆಳೆಯನ್ನು ಬೆಳೆಯಬೇಕೆಂದು ವಿಧಾಯಕ ಮಾಡಿದ್ದರು. ಹೀಗೆ ಹೇಳಿದುದರ ಮುಖ್ಯ ಉದ್ದೇಶವೇನೆಂದರೆ, ದೇಶದ ಸಂಪತ್ತನ್ನು ಹೆಚ್ಚಿಸುವುದು ಮಾತ್ರವಲ್ಲದೆ ಅಲ್ಲಿರತಕ್ಕ ಜನಗಳ ಆರೋಗ್ಯವನ್ನು ಕಾಪಾಡತಕ್ಕದ್ದೂ ಒಂದು ಮುಖ್ಯವಾದ ಉದ್ದೇಶವಾಗಿತ್ತು. ಆ ಪ್ರದೇಶದಲ್ಲಿ ಜೌಗು ತಪ್ಪಿಸುವುದಕ್ಕೆ ಬ್ಲಾಕ್ ಸಿಸ್ಟಂನ್ನು ಜಾರಿಗೆ ತರುವುದು ಅವಶ್ಯಕವೆಂದು ಹೇಳಿದ್ದರು.

ಈಗಾಗಲೇ ಈ ವರದಿಯಾಗಿ 25 ವರ್ಷಗಳಾಯಿತು. ಈ 25 ವರ್ಷಗಳಲ್ಲಿ ಅನೇಕ ಬದಲಾವಣೆಗಳಾಗಿವೆ. ಆದರೆ ಆ ವರದಿಯ ಮೂಲ ಉದ್ದೇಶವೇನಿತ್ತು—1 ಲಕ್ಷ 25 ಸಾವಿರ ಎಕರೆಗಳು ಸಾಗುವಳಿಯಾಗಬೇಕು ತನ್ಮೂಲಕ ದೇಶದ ಸಂಪತ್ತು ಹೆಚ್ಚಬೇಕು. ಬ್ಲಾಕ್ ಸಿಸ್ಟಂನ್ನು ಜಾರಿಗೆ ತರಬೇಕು—ಎಂಬುದನ್ನು ನಮ್ಮಲ್ಲಿ ಇನ್ನೂ ಪ್ರಯೋಗಕ್ಕೆ ತಂದಿಲ್ಲ. ಅದಕ್ಕಾಗಿ ನನ್ನ ಸಲಹೆ

(ಶ್ರೀ ಪಿ. ಆರ್. ರಾಮಯ್ಯನವರು)

ಯೇನೆಂದರೆ—ಈ ನಾಲೆಯು ನಿರ್ಮಾಣವಾದ ಕಳೆದ 25 ವರ್ಷಗಳಿಂದ ಈ ಸಂಬಂಧವಾಗಿ ಏನೇನು ಕೆಲಸ ನಡೆದಿದೆ, ಎಷ್ಟರಮಟ್ಟಿನ ಪ್ರಗತಿಯನ್ನು ಸಾಧಿಸಿದ್ದೇವೆ ಮತ್ತು ಯಾವಯಾವ ರೀತಿಯಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಬಹುದೆಂಬುದನ್ನು ಪರಿಶೀಲನೆ ಮಾಡುವುದಕ್ಕೆ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಬೇಕೆಂದು ಹೇಳುತ್ತೇನೆ. ಈಗ ಎರಡು ವರ್ಷಗಳ ಹಿಂದೆ ಆ ಅಣೆಕಟ್ಟಿನಲ್ಲಿ ನೀರು ನಿಲ್ಲತಕ್ಕ ವಿಷಯದಲ್ಲಿ ಬಹಳ ಚಿಂತಾಜನಕವಾದ ಪರಿಸ್ಥಿತಿ ಉಂಟಾಗಿದ್ದು, ಕೃಷ್ಣರಾಜ ಸಾಗರವೇ ಒಣಗಿ ಹೋಗುವ ಸ್ಥಿತಿಗೆ ಬಂದಿತ್ತು. ಆ ಸಂದರ್ಭದಲ್ಲಿ ಸರ್ಕಾರದವರು ಒಂದು ತಜ್ಞರ ಸಮಿತಿಯನ್ನು ನಿಯಮಿಸಿ ಅದರ ಬಗ್ಗೆ ಅವರ ಸಲಹೆಯನ್ನು ಪಡೆದರು. ಆದರೆ ಇದುವರೆಗೂ, ಮಾನ್ಯ ಸದಸ್ಯರು ಸೂಚಿಸಿದಂತೆ, ಆ ಸಮಿತಿಯ ಶಿಫಾರಸೇನು, ಆ ಶಿಫಾರಸಿನಂತೆ ಯಾವ ರೀತಿ, ಎಷ್ಟರಮಟ್ಟಿಗೆ ನಡೆದುಕೊಂಡು ಬರುತ್ತಿದ್ದಾರೆ ಎಂಬ ವಿಷಯದಲ್ಲಿ ಈ ಸಭೆಗೆ ಯಾವ ತಿಳಿವಳಿಕೆಯೂ ಇಲ್ಲ.

Sri Kadidal MANJAPPA.—Copies of the report have beeh sent to all the Members of the Assembly.

ಶ್ರೀ ಪಿ. ಆರ್. ರಾಮಯ್ಯನವರು.—ನಾನು ಈ ವಿಷಯಕ್ಕೆ ಸಂಬಂಧಪಟ್ಟ ಎಲ್ಲ ವಿವರಗಳನ್ನೂ ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯುಳ್ಳವನು. ಆ ವರದಿ ಬಹಿರಂಗವಾಗಿ ಸಾರ್ವಜನಿಕರ ತಿಳಿವಳಿಕೆಗಾಗಿ ಪ್ರಕಾಶಕ್ಕೆ ಬಂದಿಲ್ಲ, ಯಾರೋ ಕೆಲವರಿಗೆ ತಿಳಿದಿರಬಹುದು. ನಾನು ಒಬ್ಬ ಪಬ್ಲಿಸಿಸ್ಟ್ ಆಗಿ ಮಾತನಾಡುತ್ತಿದ್ದೇನೆ. ಆ ಜಲಾಶಯದಲ್ಲಿ ಏಕೆ ನೀರು ಅಷ್ಟು ಕಡಮೆಯಾಯಿತು, ಇದೇ ರೀತಿಯ ವಿಪತ್ತು ಪುನಃ ನಮ್ಮ ದೇಶಕ್ಕೆ ಬಾರದಂತೆ ನಮ್ಮ ಸರ್ಕಾರದವರು ಯಾವ ರೀತಿಯ ಮುಂಜಾಗ್ರತೆ ಕ್ರಮಗಳನ್ನು ಕೈಕೊಳ್ಳಬೇಕೆಂದು ಆ ಸಮಿತಿಯವರು ಸೂಚಿಸಿದ್ದಾರೆ ಎಂಬುದನ್ನು ತಿಳಿಯಲು ಜನ ಕುತೂಹಲರಾಗಿದ್ದಾರೆ. ದೇಶದ ಹಿತದೃಷ್ಟಿಯಿಂದ ಆ ಸಮಿತಿಯ ಶಿಫಾರಸುಗಳನ್ನು ಹೊರಗೆಡವಬೇಕೆಂದು ನಾನು ಸೂಚಿಸುತ್ತೇನೆ.

ಕಡೆಯದಾಗಿ ನಾನು ಮಾಡತಕ್ಕ ಸಲಹೆ ಇಷ್ಟೇ: ಕಳೆದ 25 ವರ್ಷಗಳಲ್ಲಿ ಕೃಷ್ಣರಾಜಸಾಗರ ಅಣೆಕಟ್ಟು ಮತ್ತು ನಾಲೆಗಳ ಸಂಬಂಧವಾಗಿ ಬೇಕಾದಷ್ಟು ಕೆಲಸಗಳು ನಡೆದಿವೆ. ಆದರೆ ಈ 25 ವರ್ಷಗಳಲ್ಲಿ ಒಂದು ಸಾರಿಯಾದರೂ ಎಲ್ಲವನ್ನೂ ಪುನರ್ವಿಮರ್ಶೆ ಮಾಡಿ ಹಿಂದೆ ಎಷ್ಟು ಮಟ್ಟಿಗೆ ಪ್ರಗತಿ ಸಾಧಿಸಿದೆವು, ಏನು ತಪ್ಪು ಮಾಡಿದೆವು ಎಂಬುದನ್ನೆಲ್ಲಾ ವಿಮರ್ಶೆ ಮಾಡಿಲ್ಲ. ಐದು ವರ್ಷ ಅಥವಾ ಹತ್ತು ವರ್ಷಗಳಿಗೊಮ್ಮೆಯಾದರೂ ಯಾವ ಯಾವ ಕಾರ್ಯಕ್ರಮಗಳನ್ನು ಕೈಕೊಳ್ಳುತ್ತೇವೆ ಎಂಬುದನ್ನು ನಿಗದಿ ಮಾಡುವುದಕ್ಕೆ ಒಂದು ಸಮಿತಿಯನ್ನು ನಿಯಮಿಸಬೇಕೆಂದು ಸಲಹೆ ಮಾಡುತ್ತೇನೆ. ಮುಖ್ಯವಾಗಿ 1 ಲಕ್ಷ 25 ಸಾವಿರ ಎಕರೆ ಜಮೀನು ಪೂರ್ತಿ ಸಾಗುವಳಿಯಾಗುವ ಹಾಗೆ, ದೇಶದ ಸಂಪತ್ತು ಹೆಚ್ಚಾಗುವ ಹಾಗೆ ತಕ್ಕ ಸಲಹೆ ಕೊಡಲು ಒಂದು ಸಮಿತಿಯನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮದ್ದೂರು).—ಸ್ವಾಮಿ, ಶ್ರೀಮಾನ್ ರಾಮಯ್ಯನವರು ಹೇಳಿದ ಸಲಹೆಯ ಸಂಬಂಧವಾಗಿ ವಿವರಣೆಯ ರೂಪವಾಗಿ ಒಂದೆರಡು ಮಾತುಗಳನ್ನು ಹೇಳುವುದು ಅಗತ್ಯವೆಂದು ಭಾವಿಸುತ್ತೇನೆ. ಒಂದು ಸಮಿತಿಯನ್ನು ಮಾಡಿ ಆ ಸಮಿತಿಯ ಸಲಹೆಯನ್ನು ಪಡೆಯುವುದು ಅಗತ್ಯವೆನ್ನುವ ಅರ್ಥದಲ್ಲಿ ಶ್ರೀ ರಾಮಯ್ಯನವರು ಮಾತಾಡಿದ್ದಾರೆ. ನಾನು ಮೊದಲು ಮಾತಾಡಿದಾಗ ಹೇಳಿದಂತೆ ಕೃಷ್ಣರಾಜಸಾಗರದ ಅಚ್ಚುಕಟ್ಟಿನಲ್ಲಿ ಕಂದಾಯ ವಿಮರ್ಶೆ ಮಾಡಿ ಸರ್ಕಾರಕ್ಕೆ ಸಲಹೆ ಮಾಡಬೇಕೆಂದು ಒಂದು ಸಮಿತಿಯನ್ನು ಮಾಡಿದರು. ಅದಕ್ಕೆ ಚೀಫ್ ಇಂಜಿನಿಯರು ಅಧ್ಯಕ್ಷರಾಗಿದ್ದರು, ಆ ಸಮಿತಿಯ ವರದಿ ಸರ್ಕಾರದ ಮುಂದಿದೆ. ಆಮೇಲೆ ಕೃಷ್ಣರಾಜಸಾಗರ ಜಲಾಶಯದಲ್ಲಿ ನೀರು ಬತ್ತಿಹೋದಾಗ, ಮುಂದೆ ಪುನಃ ಹೀಗಾಗದೇ ಇರುವುದಕ್ಕೆ ಏನು ಮಾಡಬೇಕೆಂಬ ವಿಚಾರದಲ್ಲಿ ಸರ್ಕಾರಕ್ಕೆ ಸಲಹೆ ಕೊಡಲು ಶ್ರೀ ಶೇಷಾಚಾರ್ಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದರು. ಆ ಸಮಿತಿಯ ವರದಿಯನ್ನು ರಹಸ್ಯವಾಗೇನೂ ಇಟ್ಟಿಲ್ಲ. ಹಿಂದಿನ ಶಾಸನ ಸಭೆಯ ಸದಸ್ಯರಿಗೆಲ್ಲಾ ಅದರ ಪ್ರತಿಗಳನ್ನು ಕಳುಹಿಸಲಾಗಿದೆ. ಬಹುಶಃ ಪತ್ರಿಕೆಗಳಿಗೆ ಕೊಟ್ಟಿಲ್ಲವೋ ಏನೋ ಗೊತ್ತಿಲ್ಲ. ಅಂತೂ ಆ ವರದಿ ಪ್ರಕಟವಾಗಿದೆ. ಆಮೇಲೆ ಈಚೆಗೆ ರೆವಿನ್ಯೂ ಕಮಿಷನರ ಅಧ್ಯಕ್ಷತೆಯಲ್ಲಿ ಕೆ. ಆರ್ ಎಸ್. ಆಡ್ ಹಕ್ ಸಮಿತಿಯನ್ನು ನೇಮಕ ಮಾಡಿದರು; ಅವರ ವರದಿಯೂ ಸರ್ಕಾರದ ಮುಂದಿದೆ. ಈ ಮೂರು ಸಮಿತಿಗಳ ವರದಿಗಳನ್ನೂ ಸರ್ಕಾರದವರು ಪರಿಶೀಲನೆ ಮಾಡುವುದಾದರೆ ಬೇರೊಂದು ಸಮಿತಿಯನ್ನು ನೇಮಕ ಮಾಡುವ ಅಗತ್ಯವೇ ಇಲ್ಲ, ಈ ಮೂರು ಸಮಿತಿಯವರೂ ವಿಮರ್ಶೆಗೆ ತೆಗೆದುಕೊಳ್ಳದೇ ಇರುವ ವಿಷಯ ಅಥವಾ ಸಮಸ್ಯೆ ಆ ಪ್ರಾಂತದಲ್ಲಿ ಇನ್ನೂ ಯಾವುದೂ ಇಲ್ಲ. ನಾನು ಈ ಮೂರು ಸಮಿತಿಗಳ ವರದಿಗಳನ್ನೂ ನೋಡಿದ್ದೇನೆ. ಹೀಗೆ ಸರ್ಕಾರದ ಮುಂದಿರುವ ಈ ಮೂರು ವರದಿಗಳನ್ನೂ ಸರ್ಕಾರ ಪರಿಶೀಲಿಸಿ, ಸರ್ಕಾರಿ ಆಜ್ಞೆಯಾಗುವುದಾದರೆ ಸಾಕು. ಈಗ ಹೊಸದಾಗಿ ಸಮಿತಿಯಾದರೆ, ಆ ಸಮಿತಿ ಒಂದು ಅಥವಾ ಎರಡು ವರ್ಷ ಕಾಳಿತು ವರದಿ ಸಿದ್ಧಗೊಳಿಸುವುದರೊಳಗಾಗಿ ಹೊಸ ಹೊಸ ಸಮಸ್ಯೆಗಳು ಉದ್ಭವಿಸಲು ಅವಕಾಶವಾಗಬಹುದೇ ಹೊರತು ಅದರಿಂದ ಕೆಲಸವೇನೂ ಆಗುವುದಿಲ್ಲ. ಆದುದರಿಂದ ನನ್ನ ಅಭಿಪ್ರಾಯವೇನೆಂದರೆ: ಈಗ ಸರ್ಕಾರದ ಮುಂದಿರುವ ಮೂರು ವರದಿಗಳನ್ನೂ ವಿಮರ್ಶಿಸಿ ಅವುಗಳ ವಿಷಯದಲ್ಲಿ ಸರ್ಕಾರಿ ಆಜ್ಞೆಯನ್ನು ಹೊರಡಿಸಿ ಎಷ್ಟು ಮಟ್ಟಿಗೆ ಈ ಸಲಹೆಗಳನ್ನು ಅನುಷ್ಠಾನಕ್ಕೆ ತರಬಹುದೆಂದು ತೀರ್ಮಾನ ಮಾಡಿದರೆ ಅನೇಕ ಸಮಸ್ಯೆಗಳು ಪರಿಹಾರವಾಗುವುದರಲ್ಲಿ ಸಂದೇಹವಿಲ್ಲ. ಒಂದು ಲಕ್ಷ 20 ಸಾವಿರ ಎಕರೆಗಳಿಗೆ ನೀರು ಒದಗಿಸುತ್ತೇವೆಂದು ಹೇಳಿದ್ದರು, ಇನ್ನೂ ಇದು ಆಗಿಲ್ಲವೆಂದು ಶ್ರೀಮಾನ್ ರಾಮಯ್ಯನವರು ಹೇಳಿದರು. ಹಳ್ಳಿಯವರ ಭಾಷೆಯಲ್ಲಿ ಹೇಳುವುದಾದರೆ, ಆ ರೀತಿ ಸರ್ಕಾರದವರು ಹೇಳಿದ್ದುದು ಕೇವಲ ಊಹೆಯ ಮೇಲೆ; ಬರಿಯ ಪುಸ್ತಕದ ಬದನೇಕಾಯಿ. ಆಗ ಏನೋ ಒಂದು ರೀತಿಯಲ್ಲಿ ಲೆಕ್ಕ ಹಾಕಿದರು. ಸೂರ್ಯನಿಂದ ಇಷ್ಟು ನೀರು ಆವಿಯಾಗಿ ಹೋಗುತ್ತದೆ, ಇಷ್ಟು ನೀರು ಭೂಮಿಯಲ್ಲಿ ಇಂಗಿ ಹೋಗುತ್ತದೆ, ಇಷ್ಟು ನೀರು ಉಳಿಯುತ್ತದೆ, ಎಂದು ಲೆಕ್ಕಹಾಕಿದ್ದರು. ಆ ಲೆಕ್ಕದ ಮೇಲೆ ಬ್ಲಾಕ್ ಸಿಸ್ಟಂ ಎಂಬ ಪದ್ಧತಿಯನ್ನು ಜಾರಿಗೆ ತರಬೇಕೆಂದು ಆಜ್ಞೆ ಮಾಡಿದರು. ಒಂದು ತತ್ವ ಅಥವಾ ಧ್ಯೇಯ ಸಾಧನೆಗಾಗಿ ಮಾಡಿದರೇ ವಿನಾ ಕಾರ್ಯರೂಪದಲ್ಲಿ ಅದು ಸಾಧ್ಯವಾಗಲಿಲ್ಲ. ಆ ಕಾಲದಲ್ಲಿ ನಾಲ್ಕು ಸಾವಿರ ರೈತರು ಕಾಲು ನಡಗೆಯಲ್ಲಿ ಮಂಡ್ಯದಿಂದ ಬೆಂಗಳೂರಿಗೆ ಯಾತ್ರೆ ಬಂದು ಹೇಳಿಕೊಂಡರು. ಆಗ ಜನಾಭಿಪ್ರಾಯಕ್ಕೆ ಮನ್ನಣೆ ಕೊಡುವ ಸರ್ಕಾರವಿರಲಿಲ್ಲವಾದು

ದರಿಂದ ಸರ್ಕಾರದವರು ರೈತರ ಅಭಿಪ್ರಾಯವನ್ನು ಧಿಕ್ಕರಿಸಿ ಕೆಲಸ ಮಾಡಿದರು. ತಮಗೆ ತೋಚಿದಂತೆಯೇ ಮಾಡಿದರು. ಅವರು ಮಾಡಿದುದು ಕಾಗದದಲ್ಲಿ ಉಳಿಯಿತೇ ವಿನಾ ಕಾರ್ಯರೂಪದಲ್ಲಿ ಸಾಧ್ಯವಾಗಲಿಲ್ಲ. 40 ಸಾವಿರ ಎಕರೆ ತರಿ, 40 ಸಾವಿರ ಎಕರೆ ಕಬ್ಬು, 40 ಸಾವಿರ ಎಕರೆ ಖುಷ್ಕಿ ಎಂದು ಲೆಕ್ಕ ಹಾಕಿ ಆ ರೀತಿ ಬೆಳೆ ಇಡಬೇಕೆಂದು ಮಾಡಿದರು. ಕಬ್ಬು ಹಾಕುವ ರೈತರ ಅನುಕೂಲಕ್ಕಾಗಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಿದರು. ಎಷ್ಟು ಹೆಚ್ಚು ಎಂದರೂ ಕೂಡ ಆ ಕಾರ್ಖಾನೆಗೆ ಪ್ರತಿವರ್ಷವೂ ಎಂಟು ಒಂಬತ್ತು ಸಾವಿರ ಎಕರೆ ಕಬ್ಬಿನಮೇಲೆ ಬೇಕಾಗುವುದಿಲ್ಲ. ಅರೆಯುವುದಕ್ಕೆ ಎಂಟು ಸಾವಿರ ಎಕರೆ ಕಬ್ಬು, ನಾಟುವುದಕ್ಕೆ 8 ಸಾವಿರ ಎಕರೆ, ಜಮೀನು ಹದವಾಡುವುದಕ್ಕೆ 8 ಸಾವಿರ ಎಕರೆ, ಹೀಗೆ ಸುಮಾರು 24 ಸಾವಿರ ಎಕರೆಯ ಮೇಲೆ ಕಬ್ಬಿನ ಬೆಳೆಗೆ ಬೇಕಾಗುವುದಿಲ್ಲ. ಇದರಮೇಲೆ ಕಬ್ಬು ಬೆಳೆದರೆ ರೈತರಿಗೆ ನಷ್ಟವಾಗುತ್ತದೆ. ಆದುದರಿಂದ ಇದಕ್ಕಿಂತ ಹೆಚ್ಚು ಪ್ರದೇಶದಲ್ಲಿ ಕಬ್ಬು ಬೆಳೆಯುವುದಿಲ್ಲ. ಈಗ ಒಟ್ಟು 77 ಸಾವಿರ ಎಕರೆ ತರಿಯಾಗುತ್ತದೆ. ಕಬ್ಬಿಗೆ ಹತ್ತು ದಿನಕ್ಕೊಂದು ಸಾರಿ ನೀರನ್ನು ಕೊಟ್ಟರೆ ಸಾಕು. ತರಿ ಬೆಳೆಗೆ 6 ತಿಂಗಳು ಕಾಲ ಸತತವಾಗಿ ನೀರು ಹರಿಸಬೇಕು. ಆದುದರಿಂದ ಈಗ ನೀರು ಹೆಚ್ಚು ಖರ್ಚಾಗಿ ಎಷ್ಟು ಪ್ರದೇಶಕ್ಕೆ ನೀರು ಒದಗಿಸಬೇಕಾಗಿತ್ತೋ ಅಷ್ಟು ಪ್ರದೇಶಕ್ಕೆ ಒದಗಿಸಲು ಸಾಧ್ಯವಾಗುತ್ತಿಲ್ಲ. ಕಾರ್ಯತಃ ಏನಾಗಿದೆಯೆಂದರೆ, 90 ಸಾವಿರ ಎಕರೆಗೆ ನೀರು ಒದಗುತ್ತಿದೆ. ಅನೇಕ ಪಿಕ್‌ಅಪ್ ನಾಲೆಗಳನ್ನು ತೋಡಿಸಿದ್ದಾರೆ, ಅಂದರೆ, ಸೋರು ನೀರಿಗೆ ಸಣ್ಣ ಸಣ್ಣ ಅಣೆಗಳನ್ನು ಹಾಕಿ ನೀರಿನ ಮಟ್ಟವನ್ನು ಎತ್ತರಮಾಡಿಕೊಳ್ಳುವುದಕ್ಕಾಗಿ ಪಿಕ್‌ಅಪ್‌ಗಳನ್ನು ಮಾಡಿ ಕೆಲವು ಪ್ರದೇಶಗಳಿಗೆ ನೀರಾವರಿ ಏರ್ಪಾಡು ಮಾಡಿದ್ದಾರೆ. ಎಷ್ಟುಮಟ್ಟಿಗೆ ಪ್ರಯತ್ನ ಮಾಡಬಹುದೋ ಅಷ್ಟೂ ಮಾಡಿದರೂ ಕೂಡ ಒಂದು ಲಕ್ಷ ಎಕರೆಗೆ ನೀರು ಒದಗಿಸುವುದಕ್ಕೆ ಕಷ್ಟವಾಗುತ್ತದೆಂಬುದು ಅನುಭವದಿಂದ ಗೊತ್ತಾಗಿದೆ. ಈ ವಿಚಾರವೂ ಕೂಡ ಸರ್ಕಾರದ ಮುಂದಿದೆ. ಹಿಂದೆ ನಾನು ಹೇಳಿದ ಈ ಮೂರು ಸಮಿತಿಗಳ ವರದಿಗಳಲ್ಲಿ ಎಲ್ಲಾ ಅಂಶಗಳೂ ಅಡಕವಾಗಿವೆ. ಆದುದರಿಂದ ಹೊಸ ಸಮಿತಿಯ ಅಗತ್ಯವಿಲ್ಲ. ಬೇಗ ಈ ಮೂರು ವರದಿಗಳನ್ನೂ ಪರಿಶೀಲಿಸಿ ಸರ್ಕಾರ ಆಜ್ಞೆ ಮಾಡುವುದಾದರೆ ಪುನಃ ಇನ್ನೊಂದು ಸಮಿತಿಯನ್ನು ಮಾಡಬೇಕಾದ ಅಗತ್ಯವೇ ಇಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಕಡಿದಾಳ್ ಮಂಜಪ್ಪನವರು.—ಅಧ್ಯಕ್ಷರೆ, ಸ್ವಾಮಿ, ಸಾರ್ವಜನಿಕ ಸಮಸ್ಯೆಗಳಿಗೆ ಸಂಬಂಧಪಟ್ಟ ಕಾರ್ಯಗಳಲ್ಲಿ ಸರ್ಕಾರದ ಮತ್ತು ಮಾನ್ಯ ಸದಸ್ಯರ ಅಭಿಪ್ರಾಯ ಒಂದೇ ಆಗಿದೆ, ಭಿನ್ನಾಭಿಪ್ರಾಯವಿಲ್ಲ. ಇಂಥಾ ಸಮಸ್ಯೆಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ಸರ್ಕಾರದವರು ಮುಚ್ಚಿಡತಕ್ಕ ಪ್ರಮೇಯವೇ ಇಲ್ಲ. ಶ್ರೀಮಾನ್ ವೀರಣ್ಣಗೌಡರು ಅಪ್ಪಣೆಕೊಡಿಸಿದ ಹಾಗೆ, ಕೃಷ್ಣರಾಜಸಾಗರ ಜಲಾಶಯ ಬತ್ತಿಹೋದ ಸಂದರ್ಭದಲ್ಲಿ ಒಂದು ಸಮಿತಿಯನ್ನು ಮಾಡಿ ಆದರ ವರದಿಯನ್ನು ಈಗಾಗಲೇ ಪ್ರಕಟಿಸಿ ಆಗಿನ ಶಾಸನ ಸಭಾಸದಸ್ಯರಿಗೆಲ್ಲ ಕಳುಹಿಸಲಾಗಿದೆ. ಈಚೆಗೆ ಮಾಡಿದ 'ಅಡ್‌ಹಾಕ್' ಸಮಿತಿಯ ವರದಿ ಸರ್ಕಾರದ ಮುಂದೆ ಈಗತಾನೇ ಬಂದಿದೆ.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಯಾವಾಗ ಆದದ್ದು ಈ ವರದಿ ?

May I have an idea as to when it was constituted?

Sri Kadidal MANJAPPA.—This Committee was constituted in December 1950. The Committee consisted of the Revenue Commissioner; the Director of Public Health; the Director of Agriculture; the Chief Engineer of Mysore; the Deputy Commissioner of Mandya; the Adviser, Major Irrigation Works; the Chairman, Sugarcane Cess Committee; the Chairman, Mysore Sugar Company; and the Assistant Secretary to Government, Puplic Works Department (Secretary).

ಜನಾಬ್ ಜೆ. ಮಹಮದ್ ಇಮಾಂರವರು.—ಈಗ ತಾವು ಹೇಳುತ್ತಿರುವ ವರದಿಯ ಪ್ರತಿಗಳನ್ನು ಈ ಸಭೆಯ ಸದಸ್ಯರುಗಳಿಗೆ ಹಂಚಿದ್ದಹಾಗೆ ಕಾಣುವುದಿಲ್ಲವಲ್ಲ ?

ಶ್ರೀ ಕಡಿದಾಳ್ ಮಂಜಪ್ಪನವರು.—ಈಗತಾನೆ ಈ ವರದಿ ಇನ್ನೂ ಮುದ್ರಿತವಾಗಿ ಬಂದಿದೆ. ಇದನ್ನು ಹಂಚಿಸಲಿಕ್ಕೆ ಪ್ರಯತ್ನಮಾಡುತ್ತೇನೆ,

Jauab J. MOHAMED IMAM.—I remember when Krishnarajasagar dried up, a Committee was constituted and they have also given some proposals.

Mr. SPEAKER.—They have received that report also.

Sri Kadidal MANJAPPA.—You have been given a copy of the report.

ಶ್ರೀ ಎಚ್. ಕೆ. ವೀರಣ್ಣಗೌಡರು.—ಹಾಗೆಯೇ ತಾವು ಆ ಲಕ್ಷ್ಮಣರಾಯರ ಸಮಿತಿಯ ವರದಿಯನ್ನೂ ಅಚ್ಚುಹಾಕಿಸಿ ಹಂಚಿಸಿದರೆ ಒಳ್ಳೆಯದೆಂದು ತೋರುತ್ತದೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಅಂತೂ ಆ ಸಮಿತಿಯ ವರದಿಯಲ್ಲಿ ಸರ್ಕಾರದವರು ಎಷ್ಟು ಎಕರೆ ಭೂಮಿಯನ್ನು ಸಾಗುವಳಿಗೆ ತರಬೇಕೆಂದು ಅಂದಾಜ ಮಾಡಲಾಗಿತ್ತೋ ಅಷ್ಟು ಭೂಮಿಯನ್ನು ಸಾಗುವಳಿ ಮಾಡುವುದಕ್ಕೆ ಸಾಧ್ಯವಾಗಲಿಲ್ಲ ಎಂದು ಹೇಳಿದ್ದಾರೆ. ಹಾಗೆ ಕೃಷ್ಣರಾಜಸಾಗರದ ಕೆಳಗೆ ಒಂದುಲಕ್ಷ ಇಪ್ಪತ್ತು ಸಾವಿರ ಎಕರೆ ಸಾಗುವಳಿಯಾಗಬೇಕಾಗಿದ್ದರೆ, ಅದು ಒಂದು ವಿಷಯದಿಂದ ಮಾತ್ರ ಸಾಧ್ಯ. ಆ ಒಂದು ವಿಷಯ ಯಾವುದೆಂದರೆ, ಆ ಕಪನಿ ಪ್ರಾಜೆಕ್ಟ್. ಈ ಒಂದು ಪ್ರಾಜೆಕ್ಟ್ ತಯಾರಾದರೆ ಮಾತ್ರ, ಮೊದಲನೆ ಒಂದು ನಿರೀಕ್ಷೆ ಏನಿತ್ತೋ ಅದರ ಪ್ರಕಾರ ಸಾಗುವಳಿ ಮಾಡಲು ಸಾಧ್ಯವಾಗುತ್ತದೆ.

ಇನ್ನು ಆ ವಿಶ್ವೇಶ್ವರಯ್ಯ ನಾಲಾ ಸಮಸ್ಯೆ ವಿಚಾರ ಇವೊತ್ತಿನದಲ್ಲ, ನಿನ್ನೆಯದಲ್ಲ ; ಇದು ಬಹು ಪೂರ್ವ ಕಾಲದಿಂದಲೂ ಎಂದರೆ ಸುಮಾರು 20–25 ವರ್ಷಗಳ ಹಿಂದೆಯೇ ಉದ್ಭವಿಸಿ, ಅಂದಿನಿಂದಲೂ ಹಾಗೆಯೇ ನಡೆದುಕೊಂಡು ಬರುತ್ತಿದೆ. ಆದುದರಿಂದ ಅದಕ್ಕೆ ಕೈ ಹಾಕಬೇಕಾಗಿದ್ದರೆ ನಾವು ಬಹಳ ಎಚ್ಚರದಿಂದಲೂ ಮತ್ತು ಪ್ರಾಜ್ಞರ ಸಲಹೆಗಳಿಂದಲೂ ಅದನ್ನು ಪರಿಶೀಲನೆ ಮಾಡಬೇಕಾಗಿರುತ್ತದೆಯೇ ವಿನಾ ಹೀಗೆ ಒಂದೊಂದು ಸರ್ಕಾರಿ ಹುಕ್ಕುಂ ಹೊರಡಿಸುವುದರಿಂದ ಅದು ಸಾಧ್ಯವಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ.

(ಶ್ರೀ ಕಡಿದಾಳ್ ಮಂಜಪ್ಪನವರು)

ಇನ್ನು ಈ ಬ್ಯಾಕ್‌ವಾರ್ ಸಿಸ್ಟಂ ನಮ್ಮಲ್ಲಿ ಸರಿಯಾಗಿ ನಡೆಯುತ್ತಿಲ್ಲ ಮತ್ತು ಅದು ಸರಿಯಾಗಿ ನಡೆಯುವುದಿಲ್ಲ ಎಂಬುದೇ ನನ್ನ ಅಭಿಮತವೂ ಕೂಡ.

Sri P. R. RAMAIYA.—Is there any Standing Committee to consider all the problems that arise now and then in connection with the Krishnarajasagar Works?

ಶ್ರೀ ಕಡಿದಾಳ್ ಮಂಜಪ್ಪನವರು.—Certainly. ಈಗಾಗಲೇ ಶ್ರೀಮಾನ್ ಎಚ್. ಕೆ. ವೀರಣ್ಣಗೌಡರು ತಿಳಿಸಿರತಕ್ಕ ವರದಿಯೂ ಸೇರಿಕೊಂಡು, ಮೂರು ಸಮಿತಿಯ ವರದಿಗಳು ನಮ್ಮ ಮುಂದಿರುತ್ತವೆ. ಆ ಎಲ್ಲ ವರದಿಗಳನ್ನೂ ಈ ಮಾನ್ಯ ಸಭೆಯ ಗಮನಕ್ಕೆ ತಂದು, ಸಾಧ್ಯವಾದರೆ ಎಲ್ಲರ ಅಭಿಪ್ರಾಯಗಳನ್ನೂ ಪಡೆಯಬೇಕೆಂಬ ಇಚ್ಛೆ ಇದೆ. ಇದರಲ್ಲಿ ಯಾವ ಮುಚ್ಚುಮರೆಯೂ ಇಲ್ಲ.

Mr. SPEAKER.—The question is:

"That a sum not exceeding Rs. 18,69,500 be granted to the Government to complete the sum necessary to defray the charges which will come in course of payment during the year ending 31st day of March 1953, in respect of I. N. E. and D. Works for which capital accounts are kept-Working Expenses."

The motion was adopted.

DEMAND No. 38.

Working Expenses (Electricity schemes)

XLI–RECEIPTS FROM ELECTRICITY SCHEMES.

Mr. SPEAKER.—Motion moved.—

"That a sum not exceeding Rs. 80,45,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'Receipts from Electricity Schemes–Working Expenses"

Inadequate provision for supplying electricity to rural areas of Mysore District.

ಶ್ರೀ ಯು. ಎಂ. ಮಾದಪ್ಪನವರು (ಚಾಮರಾಜನಗರ).—ಅಧ್ಯಕ್ಷರೇ, ನನ್ನ ಕತ್ತರಿ ನಿರ್ಣಯ ಈ ರೀತಿ ಇದೆ, ಅದನ್ನು ಮಂಡಿಸುತ್ತೇನೆ.—

"ಮೈಸೂರು ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸುವುದಕ್ಕೆ ಸಾಕಾದಷ್ಟು ಮೊಬಲಗನ್ನು ಒದಗಿಸಿಲ್ಲದಿರುವುದನ್ನು ಸರ್ಕಾರದವರ ಗಮನಕ್ಕೆ ತರುವುದಕ್ಕಾಗಿ XLI, ವಿದ್ಯುಚ್ಛಕ್ತಿಯಿಂದ ಬರುವ ಹುಟ್ಟುವಳಿಗಳು—ಕೆಲಸ ನಡೆಯುವ ವೆಚ್ಚಗಳು ಎಂಬ ಬಾಬಿನಲ್ಲಿ ಕೋರಿರತಕ್ಕ 80,45,500 ರೂಪಾಯಿಗಳ ಡಿಮ್ಯಾಂಡ್ ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಮೆ ಮಾಡಬೇಕು."

ಸ್ವಾಮಿ, ನಮ್ಮ ಜಿಲ್ಲೆಯಲ್ಲಿ ಸುಮಾರು ಎರಡನೆಯ ಮಹಾ ಯುದ್ಧಪ್ರಾರಂಭವಾದ ಕಾಲದಿಂದಲೂ ಮತ್ತು ಅದಕ್ಕಿಂತಲೂ ಇನ್ನೂ ಮುಂಚಿತವಾಗಿ ಕೆಲವು ಗ್ರಾಮದವರು, ತಮ್ಮ ಗ್ರಾಮಗಳಿಗೆ ವಿದ್ಯುಚ್ಛಕ್ತಿಯ ಸರಬರಾಯಿಯನ್ನು ಮಾಡಿಕೊಡಬೇಕೆಂದು ಸರ್ಕಾರಕ್ಕೆ ಒಂದೇ ಸಮನಾಗಿ ಮನವಿಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಆದರೆ ಹಿಂದಿದ್ದ ಸರ್ಕಾರದ ಮಾತು ಹೋಗಲಿ, ಇಂದು ಪ್ರಜೆಗಳ ಪ್ರತಿನಿಧಿಗಳೆಂದು ಹೇಳಿಕೊಳ್ಳುತ್ತಿರುವ ಈ ಸರ್ಕಾರ ಬಂದ ಮೇಲಾದರೂ ಅಲ್ಲಿಗೆ ಆ ವಿದ್ಯುಚ್ಛಕ್ತಿಯನ್ನು ಇನ್ನೂ ಒದಗಿಸದಿರುವುದು ಬಹಳ ಶೋಚನೀಯವಾದ ವಿಚಾರ. ಆಮೇಲೆ ನಮ್ಮ ದೇಶಕ್ಕೆ ಸ್ವರಾಜ್ಯ ಬಂದ ತರುವಾಯದಲ್ಲಿ ಪ್ರಜಾನುರಾಗಿಗಳಾಗಿರತಕ್ಕಂಥ ಮಂತ್ರಿಗಳು ಹೇಳಿದ್ದ ಮಾತುಗಳನ್ನು ಕೇಳಿ, ಅವರೆಲ್ಲರಿಗೂ ಒಂದು ಆಶಾದಾಯಕ ಮನೋಭಾವ ಉಂಟಾಗಿ, ಪ್ರತಿಯೊಬ್ಬ ಗ್ರಾಮಸ್ಥರೂ ಈ ವಿದ್ಯುಚ್ಛಕ್ತಿ ಅವರವರ ಗ್ರಾಮಕ್ಕೆ ಬಂದೇ ತೀರುತ್ತದೆಂದು ನಿರೀಕ್ಷಣೆ ಮಾಡಿಕೊಂಡಿದ್ದರು. ಆದರೆ ತಾವು ಆ ಗ್ರಾಮಸ್ಥರ ಆಸೆಯ ಪ್ರಕಾರ ವಿದ್ಯುಚ್ಛಕ್ತಿಯನ್ನು ಒದಗಿಸದೆ ಇರುವುದರಿಂದ ಅವರೆಲ್ಲರಿಗೂ ಈಗ ಇನ್ನೂ ತೀರಾ ನಿರಾಶೆಯುಂಟಾಗಿದೆ. ಅಲ್ಲದೆ ಮಂತ್ರಿವರ್ಯರಾಗಿರತಕ್ಕವರುಗಳು ಅಧಿಕಾರಕ್ಕೆ ಬರುವ ಪೂರ್ವಭಾವಿಯಾಗಿ ಜನರಿಗೂ, ಗ್ರಾಮಸ್ಥರುಗಳಿಗೂ ಏನೇನು ಅನುಕೂಲಗಳನ್ನು ಏರ್ಪಡಿಸುತ್ತೇವೆಂದು ಅವರ ಪ್ರವಾಸ ಕಾಲಗಳಲ್ಲಿ ತಿಳಿಸಿದ್ದರೋ ಅದನ್ನು ಅವರು ಈ ಅಧಿಕಾರ ಸ್ಥಾನಕ್ಕೆ ಬಂದಕೂಡಲೇ ಮರೆತು ಬಿಟ್ಟಿರುವ ಹಾಗೆ ನನಗೆ ಕಾಣುತ್ತಿದೆ. ಆದಕಾರಣ ನಾನೀಗ ಮಾನ್ಯ ಮಂತ್ರಿಗಳವರ ಗಮನವನ್ನು ಆ ಗ್ರಾಮಗಳ ಕಡೆಗೆ ಸೆಳೆಯಲು ನಿಂತಿದ್ದೇನೆ. ಅಂತೂ ಒಟ್ಟಿನಲ್ಲಿ ಇಷ್ಟು ಹೇಳಬಹುದು: ಈ ಹಿಂದೆ ಇದ್ದ ಮಂತ್ರಿಮಂಡಲದವರು ತಮ್ಮ ಅಧಿಕಾರವನ್ನು ಬಿಟ್ಟುಕೊಟ್ಟು ಹೋಗತಕ್ಕ ಕಡೆಯ ಘಳಿಗೆಯಲ್ಲಿ ಈ ವಿದ್ಯುಚ್ಛಕ್ತಿಯ ಸರಬರಾಯಿಯನ್ನು ಈ ಗ್ರಾಮಾಂತರಗಳಿಗೂ ಕೊಡಬಹುದೆಂಬ ಒಂದು ಸೂಚನೆಯನ್ನು ಮಾಡಿ ಹೋಗಿರಬಹುದೆಂದು ನಾನು ನಂಬಿದ್ದೇನೆ. ಗ್ರಾಮದಲ್ಲಿರತಕ್ಕ ಪಂಚಾಯಿತಿಯವರೂ ಮತ್ತು ಗ್ರಾಮದ ಜನಗಳ ಮುಖಂಡರಾಗಿರತಕ್ಕಂಥವರೂ ಈ ವಿಷಯವನ್ನು ಪದೇ ಪದೇ ಸರ್ಕಾರದವರ ಗಮನಕ್ಕೆ ತರುತ್ತಲೇ ಇದ್ದಾರೆ.

10 A.M.

ಆದಾಗ್ಯೂ ಈಗಿನ ಸರ್ಕಾರದ ಈ ಬಡ್ಜೆಟ್ಟಿನಲ್ಲಿ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವ ವಿಷಯದಲ್ಲಿ ಹಣವನ್ನು ಒದಗಿಸಿರುವಂತೆ ನನಗೆ ಕಾಣಲಿಲ್ಲ. ಕೆಲವು ಗ್ರಾಮಗಳಿಗೆ ನಮ್ಮ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಲು ಈ ಬಡ್ಜೆಟ್ಟಿನಲ್ಲಿ ಈ ದಿವಸ ಸೂಚನೆ ಕೊಟ್ಟಿದೆ. ಆದರೆ ನನ್ನ ಮನೋಭಾವನೆ ಕೆಲವೇ ಗ್ರಾಮಗಳ ಕಡೆ ಇದೆಯೆಂದು ಯಾರೂ ಭಾವಿಸಬಾರದು. ನಮ್ಮ ಮೈಸೂರು ಜಿಲ್ಲೆ ಮತ್ತು ಇತರ ಜಿಲ್ಲೆಗಳಲ್ಲಿ ಇರುವ ಜನರ ವಿಷಯದಲ್ಲೂ ನಮ್ಮ ಸಹಾನುಭೂತಿಯಿದೆ. ನಮ್ಮ ಜಿಲ್ಲೆಯು ಒಂದು ದೌರ್ಭಾ

ಗ್ಯವನ್ನು ಈ ದಿವಸ ತಮ್ಮ ಮುಂದಿಡಲು ಇಲ್ಲಿ ನಿಂತಿದ್ದೇನೆ. ನಂಜನಗೂಡು, ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು ಈ ತಾಲ್ಲೂಕುಗಳಲ್ಲಿ ವಿದ್ಯುಚ್ಛಕ್ತಿಯ ಸಹಾಯವಿಲ್ಲದೆ ಮತ್ತು ಮಳೆ ಬೆಳೆಗಳಿಲ್ಲದೆ ಕ್ಷಾಮ ತಲೆದೋರಿ ಬಹಳ ಕಷ್ಟವಾಗಿದೆ. ಅವುಗಳಿಗೆ ಒಂದು ಸ್ಥಾನವಾನ ಇಂಥಾ ಸಂದರ್ಭದಲ್ಲಿ ಒದಗದಿರುವುದು ಬಹಳ ಅನಾನುಕೂಲವಾಗಿದೆ. ಸುಮಾರು ಹತ್ತು ವರ್ಷಗಳಿಂದ ಈ ಅಭಾವವನ್ನು ಸರ್ಕಾರದವರಲ್ಲಿ ತಿಳಿಸಲಾಯಿತು. ಗ್ರಾಮಾಂತರಗಳಲ್ಲಿ ವಾಸ ಮಾಡುವವರೆಲ್ಲರೂ ವ್ಯವಸಾಯಗಾರರೇ ಆಗಿರುವಾಗ ಒಂದು ಕ್ರಾಂತಿಕಾರಕವಾದ ಮತ್ತು ಪ್ರಗತಿಶೀಲವಾದ ಬದಲಾವಣೆಯು ವ್ಯವಸಾಯ ಕ್ಷೇತ್ರದಲ್ಲಿ ಆಗಬೇಕಾದರೆ ವಿದ್ಯುಚ್ಛಕ್ತಿ ಸರಬರಾಯಿ ಪ್ರತಿಯೊಂದು ಗ್ರಾಮಕ್ಕೂ ಅತ್ಯಗತ್ಯ. ಎಂಬುದಾಗಿ ಪ್ರತಿಯೊಬ್ಬ ಮಂತ್ರಿಗಳೂ ಹಿಂದೆ ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವ ಭರದಲ್ಲಿ ಹೇಳುತ್ತಿದ್ದರು ಎಂಬುದು ನನಗೆ ಈಗ ನೆನಪಿಗೆ ಬರುತ್ತಿದೆ. ಈ ದಿವಸ ಅವರು ಸರ್ಕಾರದಲ್ಲಿ ಒಂದು ಸ್ಥಾನವನ್ನು ಆಕ್ರಮಿಸಿದ ಮೇಲೆ ಗ್ರಾಮಾಂತರಗಳ ವಿಚಾರವನ್ನು ಜ್ಞಾಪಕ ಮಾಡದಿದ್ದರೆ ವಿಧಿಯಿಲ್ಲ. ನಮ್ಮ ಕಡೆ ಗ್ರಾಮಗಳಲ್ಲಿ ಕಪಿಲೆ ಬಾವಿಗಳಿಂದ ನೀರನ್ನೆತ್ತಿ ವ್ಯವಸಾಯಕ್ಕೆ ಉಪಯೋಗಿಸಬೇಕಾಗಿದೆ. ಅಂಥಾ ಕಡೆಗೆ ವಿದ್ಯುಚ್ಛಕ್ತಿಯನ್ನೊದಗಿಸಿದರೆ ನೀರಾವರಿ ಕೆಲಸಗಳನ್ನು ಮಾಡಲು ಬಹಳ ಅನುಕೂಲವಾಗುತ್ತದೆ ಮತ್ತು ಆಹಾರದ ಅಭಾವವನ್ನು ನೀಗಲು ಸಾಧ್ಯವಾಗುತ್ತದೆ. ಇಂಥಾ ಒಂದು ಕಾರ್ಯಕ್ರಮವನ್ನು ಸರ್ಕಾರದವರು ಕೈಕೊಳ್ಳದಿರುವುದು ಶೋಚನೀಯ. ವಿದ್ಯುಚ್ಛಕ್ತಿ ಸರಬರಾಯಿ ವಿಷಯದಲ್ಲಿ ನಮ್ಮ ಡಿಸ್ಟ್ರಿಕ್ಟಿನಲ್ಲಿ ಅಥವಾ ಬೇರೆ ಡಿಸ್ಟ್ರಿಕ್ಟುಗಳಲ್ಲಿ ಲೋಪದೋಷಗಳು ಇವೆಯೋ ಏನೋ ಗೊತ್ತಿಲ್ಲ. ಒಟ್ಟಿನಲ್ಲಿ ಗ್ರಾಮಾಂತರಗಳಿಗೆ ಸಾಕಾದಷ್ಟು ವಿದ್ಯುಚ್ಛಕ್ತಿ ಸರಬರಾಯಿ ಮಾಡದಿರುವುದು ಒಂದು ಲೋಪ. ಪ್ರತಿಯೊಂದು ನಗರಕ್ಕೂ ಸರಬರಾಯಿ ಮಾಡುತ್ತಿರುವುದೇನೋ ಸರಿಯೆ. ಆದರೆ ಗ್ರಾಮಾಂತರಗಳ ಮೂಲಕ ನಗರಗಳಿಗೆ ಸರಬರಾಯಿ ಮಾಡುವ ಪದ್ಧತಿ ಜಾರಿಯಲ್ಲಿಲ್ಲ. ನಗರಗಳಿಗೆ ಕೊಡುವಾಗ ಲೈನುಗಳು ಗ್ರಾಮಾಂತರಗಳ ಮೂಲಕ ಹೋಗುವುದಾದರೆ ಆಗ ಸರ್ಕಾರಕ್ಕೂ ವೆಚ್ಚ ಸಹಾ ಉಳಿಯುತ್ತದೆ. ಅದರಿಂದ ಗ್ರಾಮಾಂತರ ಪ್ರದೇಶಗಳ ಜನರಿಗೆ ಬೆಳಕು ಮತ್ತು ವ್ಯವಸಾಯಕ್ಕೆ ಸಹಾಯವಾಗುತ್ತದೆ. ಈ ಒಂದು ಮಾರ್ಗವನ್ನು ಸರ್ಕಾರದವರು ಯೋಚನೆ ಮಾಡಿಲ್ಲ. ಗ್ರಾಮಾಂತರ ಪ್ರದೇಶಗಳಿಗೆ ಅನುಕೂಲವಾಗುವ ಈ ಪದ್ಧತಿಯನ್ನು ಅನುಸರಿಸಿಲ್ಲ. ಆದ್ದರಿಂದ ಈ ವಿಷಯವನ್ನು ಗಮನಕ್ಕೆ ತಂದು ಗ್ರಾಮಾಂತರಗಳ ಮೇಲೆ ಲೈನು ಹೋಗುವಂತೆ ಮಾಡಿದರೆ ಅಲ್ಲಿನ ಜನರಿಗೂ ಮತ್ತು ಸರ್ಕಾರಕ್ಕೂ ಅನುಕೂಲ. ಅಲ್ಲದೆ ಹಿಂದೆ ಮಹಾಯುದ್ಧಕ್ಕೆ ಮುಂಚೆ ಮನವಿ ಮಾಡಿಕೊಂಡ ಗ್ರಾಮಗಳಿಗೂ ಮತ್ತು ಅಲ್ಲಿಂದೀಚೆಗೆ ಮನವಿ ಬಂದಿರುವ ಇತರ ಗ್ರಾಮಗಳಿಗೂ ವಿದ್ಯುಚ್ಛಕ್ತಿ ಸರಬರಾಯಿ ಮಾಡುವ ವಿಷಯದಲ್ಲಿ ಒಂದು ಸರಿಯಾದ ಮನೋಭಾವನೆಯನ್ನು ತೋರಿಸಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಟಿ. ಸಿದ್ದಲಿಂಗಯ್ಯನವರು (ಕೈಗಾರಿಕಾ ಶಾಖೆಯ ಮಂತ್ರಿಗಳು).—ಶ್ರೀ ಮಾದಪ್ಪನವರು ಮೈಸೂರು ಜಿಲ್ಲೆ ಒಂದನ್ನು ಮಾತ್ರ ಅವರ ಮನಸ್ಸಿನಲ್ಲಿ ತುಂಬಾ ತುಂಬಿಕೊಂಡಿದ್ದಾರೆಂದು ಕಾಣುತ್ತದೆ. ಆದರೆ ಸರ್ಕಾರದ ....

ಶ್ರೀ ಕಡಿದಾಳ್ ಮಂಜಪ್ಪನವರು.—ಸ್ವಾಭಾವಿಕ.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ಮೆಚ್ಚಬೇಕು. ಸರ್ಕಾರದ ದೃಷ್ಟಿ ಸಂಸ್ಥಾನಾದ್ಯಂತ ಇರಬೇಕು ಎಂಬುದನ್ನು ಅವರು ಗಮನದಲ್ಲಿಡಬೇಕೆಂದು ಬೇಡಿಕೊಳ್ಳುತ್ತೇನೆ. ಈಗಿರುವ ಹಾಗೆ ಮೈಸೂರು ಜಿಲ್ಲೆಯೊಂದರಲ್ಲೇ 60 ಕಡೆ ರೂರಲ್ ಎಲೆಕ್ಟ್ರಿಫಿಕೇಷನ್ ಆಗಿದೆ ಮತ್ತು ಗುಂಡ್ಲುಪೇಟೆ, ಯಳಂದೂರು ಇವನ್ನೂ ಈಚೆಗೆ ಸೇರಿಸಿದೆ. ಇನ್ನೂ ಕೆಲವು ಅಂದಾಜುಗಳು ತಯಾರಾಗಿವೆ. ಹೆಗ್ಗಡದೇವನಕೋಟೆ, ಸಿರಿಗೆರೆ, ಮಿರ್ಲೆ, ಜಯಪುರ, ಎಲೇಕೆರೆ ಈ ಸ್ಥಳಗಳಿಗೆ ಈ ವರ್ಷದ ಬಡ್ಜೆಟ್ಟಿನಲ್ಲಿ ಹಣ ಒದಗಿಸಿದೆ. ಇವೆಲ್ಲಾ ಮೈಸೂರು ತಾಲ್ಲೂಕಿಗೆ ಸೇರಿವೆ ಮತ್ತು ಇನ್ನೂ 60 ಗ್ರಾಮಗಳು ಮೈಸೂರು ಡಿಸ್ಟ್ರಿಕ್ಟಿಗೆ ಸೇರಿವೆ.

ಶ್ರೀ ಯು. ಎಂ. ಮಾದಪ್ಪನವರು.—ಎಷ್ಟು ದಿವಸದಿಂದ ಆಗಿರುವುದು! 1947ರಿಂದ ಅಥವಾ 1948ರಿಂದ ಆಗಿದೆಯೆ ಎಂಬುದನ್ನು ತಿಳಿಸಬೇಕು.

ಶ್ರೀ ಟಿ. ಸಿದ್ದಲಿಂಗಯ್ಯನವರು.— ಡಿಸ್ಟ್ರಿಕ್ಟ್ ಡಿಸ್ಟ್ರಿಕ್ಟಿಗೆ ಹೋಲಿಕೆ ಮಾಡಿದರೆ ಮೈಸೂರು ಡಿಸ್ಟ್ರಿಕ್ಟಿಗೆ ಇತರ ಡಿಸ್ಟ್ರಿಕ್ಟುಗಳಿಗಿಂತ ಹೆಚ್ಚಾಗಿ ಕೊಟ್ಟಿದೆಯೆಂದು ಪ್ರಶ್ನೋತ್ತರಗಳ ಕಾಲದಲ್ಲಿ ಹೇಳಿದೆ.

ಶ್ರೀ ಯು. ಎಂ. ಮಾದಪ್ಪನವರು.—ಬುಲೆಟಿನ್‌ನಲ್ಲಿ ಮೈಸೂರು ಡಿಸ್ಟ್ರಿಕ್ಟಿಗೆ ಸರಿಯಾಗಿ ಸರಬರಾಯಾಗಿಲ್ಲ, ಎಲ್ಲಾ ಜಿಲ್ಲೆಗಳಿಗಿಂತ ಮೈಸೂರು ಜಿಲ್ಲೆ ದೊಡ್ಡದು ಎಂದು ಹೇಳಿದೆ.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈ ಎಲ್ಲಾ ವಿಷಯಗಳನ್ನೂ ಗಮನಿಸಿ ಸಂಸ್ಥಾನಕ್ಕೆ ಏಕರೀತಿಯಾಗಿ ಯಾವ ರೀತಿ ವಿದ್ಯುಚ್ಛಕ್ತಿ ಕೊಡಬೇಕೋ ಅದನ್ನು ಸರ್ಕಾರದವರು ಏರ್ಪಾಡು ಮಾಡುತ್ತಿದ್ದಾರೆ. ಈಗಾಗಲೇ ಹೇಳಿದ ಪ್ರಕಾರ ಬರೀ ಮೈಸೂರು ಡಿಸ್ಟ್ರಿಕ್ಟ್ ಒಂದನ್ನೇ ದೃಷ್ಟಿಯಲ್ಲಿಡಬಾರದು. ಅಲ್ಲಿಂದ ಚುನಾಯಿತರಾಗಿ ಬಂದಿರುವ ಸದಸ್ಯರು ಆ ದೃಷ್ಟಿಯನ್ನು ಇಟ್ಟುಕೊಳ್ಳಬಹುದು. ಆದರೆ ಈ ಸಂದರ್ಭದಲ್ಲಿ ಹೇಳುವಾಗ ಜವಾಬ್ದಾರಿಯುತವಾಗಿ, ನಿಷ್ಪಕ್ಷಪಾತವಾಗಿ ನಡೆದುಕೊಳ್ಳಬೇಕೆಂಬುದನ್ನು ಅರಿಕೆ ಮಾಡಿಕೊಳ್ಳುತ್ತೇನೆ. ಆ ಮೇಲೆ ಗ್ರಾಮಾಂತರಗಳಿಗೆ ಯಾವ ರೀತಿ ಸರ್ವಿಸ್ ಕೊಡುತ್ತೇವೆ ಎಂಬ ವಿಚಾರದಲ್ಲಿ ಹಿಂದೆ ಏನು ಹೇಳುತ್ತಿದ್ದೆವೋ ಈಗಲೂ ಅದನ್ನೇ ಮಾಡಬೇಕೆಂಬ ಉತ್ಸಾಹವನ್ನು ತುಂಬಿಕೊಂಡಿದ್ದೇವೆ. ಆದರೆ ಬಡ್ಜೆಟ್ಟುಗಳ ವಿಚಾರದಲ್ಲಿ ಅಸೆಂಬ್ಲಿಯವರು ಯಾವ ರೀತಿ ಗ್ರಾಂಟು ಕೊಡುತ್ತಾರೋ ಅದರಂತೆ ನಾವುಗಳು ನಡೆದುಕೊಳ್ಳಲು ಸದಾ ಸಿದ್ಧರಾಗಿದ್ದೇವೆ. ಯಾರೂ ಈ ಇಲಾಖೆಯ ಮೇಲೆ ಆಕ್ಷೇಪಣೆ ಮಾಡಿಲ್ಲ. ಇದನ್ನು ಬಹಳ ಸಂತೋಷವಾಗಿ ಸ್ವಾಗತಿಸುತ್ತೇನೆ. ನಮ್ಮ ಸರ್ವಿಸ್ ತಾವೆಲ್ಲ ಮೆಚ್ಚಿಕೊಂಡಿದ್ದೀರಿ, ತಮಗೆ ಪ್ರೀತಿಯಿದೆ...........

ಜನಾಬ್ ಜೆ. ಮಹಮದ್ ಇಮಾಂರವರು.—ಮೆಚ್ಚಿಕೊಂಡಿದ್ದೇವೆಂದು ಹೇಳಲಿಲ್ಲ. ಆಕ್ಷೇಪಣೆ ಮಾಡದೇ ಇದ್ದರೆ ಆ ಅರ್ಥವಲ್ಲ.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಜನಾಬ್ ಇಮಾಂರವರು ಹೇಳಿದಂತೆ ಯಾರೂ ಮೆಚ್ಚದೆಯಿದ್ದರೂ ಆಕ್ಷೇಪಣೆ ಮಾಡದಿದ್ದರೆ ಮೆಚ್ಚಿಕೊಂಡ ಹಾಗೆಯೇ. ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಕಾರ್ಯಗಳು ಬಹಳ ತ್ವರಿತವಾಗಿ ನಡೆಯುತ್ತಿವೆ ಎಂಬುದು ಗೊತ್ತೇ ಇದೆ. ಯಾವುದಾದರೂ ಒಂದು ರಿಕ್ವಿಜಿಷನ್ ಬಂದ ಕೂಡಲೇ ಅಂದಾಜು

(ಶ್ರೀ ಟಿ. ಸಿದ್ದಲಿಂಗಯ್ಯನವರು)

ಮಾಡಿ ತರಿಸುತ್ತಾರೆ. ಇದರಲ್ಲಿ ಏನು ಸ್ವಲ್ಪ ಅನಾನುಕೂಲ, ಪ್ರತಿಬಂಧಕ ಬರುತ್ತದೆ ಎಂಬುದನ್ನು ಗಮನಕ್ಕೆ ತರುತ್ತೇನೆ. ಲೈನು ಬಹಳ ಹತ್ತಿರ ಒಂದು ಫರ್ಲಾಂಗಿನಲ್ಲಿವೆ, ನಮ್ಮ ಊರಿಗೆ ವಿದ್ಯುಚ್ಛಕ್ತಿ ಬರುತ್ತದೆ ಎಂದು ಕೆಲವರು ತಿಳಿದುಕೊಂಡಿದ್ದಾರೆ. ಆದರೆ ಆ ಲೈನಿನಲ್ಲಿ ಇಷ್ಟು ಲೋಡು ಇರಬೇಕು ಎಂದು ಗೊತ್ತಾಗಿರುತ್ತದೆ. ಆದ್ದರಿಂದ ಹೆಚ್ಚು ಪವರ್ ಉಪಯೋಗಿಸುವುದಕ್ಕೆ ಸಾಧ್ಯವಾಗುವುದಿಲ್ಲ; ಅದಕ್ಕೆ ಟ್ರಾನ್ಸ್‌ಫಾರ್ಮರ್, ಸ್ಟೆಪ್‌ಡೌನ್ ಸ್ಟೇಷನ್, ಲೈನ್‌ಮೆನ್ನುಗಳಿಗೆ ಮನೆ ಇವೆಲ್ಲಾ ಬೇಕಾಗುತ್ತವೆ. ಅವನ್ನೆಲ್ಲಾ ಲೆಕ್ಕಹಾಕಿದರೆ ಲಕ್ಷಾಂತರ ರೂಪಾಯಿಗಳು ಬೇಕಾಗುತ್ತವೆ.

ಎರಡನೆಯದಾಗಿ ಈ ಸಾಮಾನುಗಳು ಸಿಕ್ಕುವುದು ಬಹಳ ಕಷ್ಟ, ಅವು ಸಿಕ್ಕಿದ ಹಾಗೆ ಹೆಚ್ಚು ಕೆಲಸ ಆಗುತ್ತದೆ. ಹೋದ ವರ್ಷ ಅನೇಕಕಡೆ ಮಂಜೂರಾಗಿತ್ತು, ಹಿಂದಿನ ಮಂತ್ರಿಗಳು ಮಾಡಿದರು. ಅವು ಈಗ ಅರ್ಧ ಮುಗಿದಿವೆ. ಅವನ್ನು ಪೂರೈಸುವುದಕ್ಕಾಗಿ ತ್ವರಿತವಾಗಿ ಕೆಲಸ ಆಗುತ್ತಿದೆ.

ಶ್ರೀಮಾನ್ ಮಾದಪ್ಪನವರು ಹೇಳುವಂತೆ, ನಿರಾಶೆ ಉಂಟಾಗಿದೆ ಎಂದು ಹೇಳುವುದು ಶುದ್ಧ incorrect. ಎಲ್ಲರಿಗೂ ಬಹಳ ಆಶಾದಾಯಕವಾಗಿದೆ, ಇವೊತ್ತಲ್ಲ ನಾಳೆ ಎಲೆಕ್ಟ್ರಿಕ್ ಪವರ್, ಎಲೆಕ್ಟ್ರಿಕ್ ದೀಪ ಬಂದೇ ಬರುತ್ತದೆ ಎಂದು ಅಂದು ಕೊಂಡದ್ದಾರೆ. ನಿರಾಶೆ ಪಡಬೇಕಾಗಿಲ್ಲ. ಮುಂದೆ ಎಲೆಕ್ಟ್ರಿಕ್ ಪವರ್ ಬೇಕಾದಷ್ಟು ಉತ್ಪತ್ತಿ ಆಗುತ್ತದೆ. ಕೊಡತಕ್ಕ ಕಾಲದಲ್ಲಿ ಎಲ್ಲರಿಗೂ ಕೊಡಿಸಲಾಗುತ್ತದೆ. ನಮಗಿರತಕ್ಕ ಒಂದು ಕಷ್ಟವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು, ಅದಕ್ಕೆ sympathise ಮಾಡಬೇಕು. ಕಷ್ಟವೇನೆಂದರೆ ನಮ್ಮ ಬಡ್ಜೆಟ್ಟು. ಈ ಇಲಾಖೆಯ ಕೆಲಸ ಕಾರ್ಯಗಳನ್ನು ತ್ವರೆಯಿಂದ ನಡೆಸುವುದಕ್ಕೆ ಇವೊತ್ತು ಬಡ್ಜೆಟ್ ಪರ್ಮಿಟ್ ಮಾಡಿರುವ ಪ್ರಕಾರ—ನಮಗೆ ಈ ಬಡ್ಜೆಟ್‌ನಲ್ಲಿ ಏನು ತಾವು ಒಪ್ಪಿಗೆ ಕೊಟ್ಟಿದ್ದೀರೋ ಆ ಜವಾಬ್ದಾರಿ ತಮ್ಮದು—ನಾವು ಕೆಲಸ ಮಾಡಿರುವ ಪ್ರಕಾರ ಗ್ಯಾರಂಟಿ ಹೇಳುತ್ತೇವೆ. ಈಗಲೇ ಇನ್ನೂ ಹೆಚ್ಚು ಹಣವನ್ನು ಬಡ್ಜೆಟ್‌ನಲ್ಲಿ ಪ್ರೊವೈಡ್ ಮಾಡಿ. ಈಗ 30·50 ಲಕ್ಷ ರೂಪಾಯಿಗಳನ್ನು ಮಾತ್ರ ಗ್ರಾಮಾಂತರ ಪ್ರದೇಶಗಳಿಗೆ ಪವರ್ ಸಪ್ಲೈ ಮಾಡುವುದಕ್ಕೆ ಪ್ರೊವೈಡ್ ಮಾಡಿದೆ. ಹೋದ ವರ್ಷ ಮಂಜೂರಾಗಿರತಕ್ಕ, ಅರ್ಧ ನಡೆದಿರತಕ್ಕ ಕೆಲಸಗಳನ್ನು ಈ ವರ್ಷ ಪೂರೈಸುವುದಕ್ಕೆ ಇನ್ನೂ 62 ಲಕ್ಷ 70 ಸಾವಿರದ 200 ರೂಪಾಯಿಗಳು ಬೇಕು.

ಶ್ರೀ ಎ. ಭೀಮಪ್ಪನಾಯಕರು (ಮೊಳಕಾಲ್ಮುರು).—ಹೊಸದಾಗಿ ಮಂಜೂರು ಮಾಡಿದಹಾಗೆ ಏನಾಯಿತು? ಹಳೆಯ ಕೆಲಸಗಳಿಗೆ ಎಂದು ಹಾಕಿದ್ದೀರಿ. ನಮ್ಮಲ್ಲಿ ಆಶೆ ಹುಟ್ಟುವಹಾಗೆ ಮಾಡಿದ್ದೀರಿ ಅಷ್ಟೆ.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಗ ಜನರಲ್ಲಿ ನಿರಾಶೆ ಹುಟ್ಟಿಸಬಾರದು. ಎಲ್ಲರಿಗೂ ಆಶೆ ಹುಟ್ಟುವಂತೆ ಮಾಡಿದ್ದೇವೆ. ಎಲ್ಲರಿಗೂ ಮಂಜೂರು ಮಾಡಿದ್ದೇವೆ. ಮಂಜೂರು ಮಾಡಿದ್ದನ್ನು ಎಕ್ಸೆಕ್ಯೂಟ್ ಮಾಡುವುದಕ್ಕೆ ಏನು ಬೇಕೋ ಅದು ಮಾತ್ರ ಇಲ್ಲ. ಇದು ಅಲ್ಲದೆ ಅಂದಾಜು ತಯಾರಾಗಿ ಎಕ್ಸೆಕ್ಯೂಟ್ ಮಾಡುವುದಕ್ಕೆ ಸಿದ್ಧವಾಗಿರುವ ಕೆಲಸಕ್ಕೆ 42 ಲಕ್ಷದ 20 ಸಾವಿರ ರೂಪಾಯಿಗಳು ಬೇಕು. ಸ್ಯಾಂಕ್ಷನ್ ಆಗಿದೆ ಎಂದರೆ ದುಡ್ಡೂ ಕೂಡ ಇರುತ್ತದೆ ಎಂದು ಅನೇಕರು ಅಭಿಪ್ರಾಯ ಪಡುತ್ತಾರೆ.

ಜನಾಬ್ ಮಹಮದ್ ಇಮಾಂರವರು.—ದುಡ್ಡು ಇಲ್ಲದೆ ಸ್ಯಾಂಕ್ಷನ್ ಹೇಗೆ ಮಾಡಿದಿರಿ?

ಶ್ರೀ ಟಿ ಸಿದ್ದಲಿಂಗಯ್ಯನವರು.—ಎಸ್ಟಿಮೇಟು ತಯಾರು ಮಾಡಿಕೊಳ್ಳುತ್ತೇವೆ. ಗೌರ್ನ್‌ಮೆಂಟ್ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಎಂದು ಹೇಳಿ ಜನಾಬ್ ಇಮಾಂರವರ ಮಂತ್ರಿತ್ವದ ಕಾಲದಲ್ಲೂ ಇತ್ತು, ಆ ಅಡ್ಮಿನ್‌ಸ್ಟ್ರೇಟಿವ್ ಸ್ಯಾಂಕ್ಷನ್ ಮಾಡುತ್ತಾರೆ. ಆ ಮೇಲೆ ಅವೇಲಬಿಲಿಟಿ ಆಫ್ ಫಂಡ್ಸ್ ನೋಡಿಕೊಂಡು ಜಾರಿಗೆ ತರುತ್ತಾರೆ. ಆದ್ದರಿಂದ ಯಾರೂ ಕೂಡ ನಿರಾಶೆಯಾಗಬಾರದು. ಈಗ ಒಟ್ಟಿಗೆ ಮಂಜೂರಾಗಿ ಪೂರೈಸಬೇಕಾದ ಕೆಲಸಗಳು ಮತ್ತು ಪ್ರಾರಂಭವಾಗಿ ಅರ್ಧವಾಗಿರುವುದನ್ನು ಪೂರೈಸಬೇಕಾಗಿರುವ ಕೆಲಸಗಳಿಗೆ 1 ಕೋಟಿ 5 ಲಕ್ಷ 46 ಸಾವಿರದ 200 ರೂಪಾಯಿಗಳು ಬೇಕು. ಇದೂ ಅಲ್ಲದೆ ಇರಿಗೇಷನ್ ಪಂಪ್ ಹಾಕುವುದಕ್ಕೆ 20 ಲಕ್ಷ ಮಾತ್ರ ನೀವು ಪ್ರೊವೈಡ್ ಮಾಡಿದ್ದೀರಿ. ಅದಕ್ಕೆ ನಾವು ಈಗ ಇನ್ನೂ ಜಾಸ್ತಿ ಕೇಳಿದ್ದೇವೆ. ಇನ್ನೂ ಇನ್‌ಕಂಪ್ಲೀಟ್ ಆಗಿರತಕ್ಕ ಇರಿಗೇಷನ್‌ಫಂಡ್ ಸೆಟ್ಟುಗಳಿಗೆ ಪವರ್ ಕೊಡಬೇಕಾಗಿದ್ದರೆ 36 ಲಕ್ಷ ರೂಪಾಯಿಗಳು ಬೇಕಾಗಿವೆ. ಅದರಲ್ಲೂ ಕೂಡ 1 ಕೋಟಿ ರೂಪಾಯಿ ಸ್ಯಾಂಕ್ಷನ್ ಆಗಿರತಕ್ಕ ಎಸ್ಟಿಮೇಟುಗಳು ಸಿದ್ಧವಾಗಿವೆ. ಈಗಿರತಕ್ಕ ಇನ್‌ಕಂಪ್ಲೀಟ್ ವರ್ಕ್ಸ್‌ಗಳಿಗೇ ಇಷ್ಟು ಹಣ ಬೇಕಾಗಿರುವಾಗ ಹೊಸ ಕೆಲಸಗಳಿಗೆ ಯಾವ ರೀತಿಯಲ್ಲಿ ಭರವಸೆ ಕೊಡಬೇಕು ಅನ್ನುವುದನ್ನು ತಾವೇ ಯೋಚನೆ ಮಾಡಬೇಕು. ನಾನು ತಮ್ಮಲ್ಲಿ ಅಪೀಲ್ ಮಾಡುತ್ತೇನೆ, ಸಭೆಗೆ ಅಪೀಲ್ ಮಾಡುತ್ತೇನೆ, ಇನ್ನಾವ ವಿಧವಾದ ಸಂದೇಹವನ್ನೂ ಇಟ್ಟುಕೊಳ್ಳಕೂಡದು, ಎಲೆಕ್ಟ್ರಿಕ್ ಪವರ್‌ನ ಸರಬರಾಯಿಯ ಕೆಲಸವನ್ನು ಇಲಾಖೆಯವರು ನಿಜವಾಗಿಯೂ ಬಹಳ ತ್ವರಿತವಾಗಿ ನಡೆಸಿಕೊಡುವಂತೆ ಮಾಡುತ್ತೇವೆ. ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟ್‌ನವರು ಬಹಳ ಎಕನಾಮಿಕಲ್ ಆಗಿ ಕೆಲಸವಾಡುತ್ತಾ ಇದ್ದಾರೆ. ಮದರಾಸು, ಬೊಂಬಾಯಿಗಳಿಗೆ ಹೋಲಿಸಿ ನೋಡಿದರೆ ನಮ್ಮ ಡಿಪಾರ್ಟ್‌ಮೆಂಟಿನವರು ಬೇರೆ ಕಂಟ್ರಾಕ್ಟರುಗಳಿಗೆ ಕಂಟ್ರಾಕ್ಟ್ ಕೊಡದೇ ತಾವೇ ಎಲ್ಲಾ ಕೆಲಸ ನಡೆಸುತ್ತಾ ಇದ್ದಾರೆ. ಆದ್ದರಿಂದ ಅಸೆಂಬ್ಲಿಯವರು ಸ್ವಲ್ಪ ಹೆಚ್ಚು ಹಣ ಒದಗಿಸುವುದಾದರೆ ಈ ಕೆಲಸಗಳನ್ನೆಲ್ಲಾ ಪ್ರಾರಂಭ ಮಾಡಬಹುದು. ಈ ದೃಷ್ಟಿಯಿಂದ ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಯಾವುದೇ ಕೆಲಸ ಮಾಡಬೇಕಾದರೂ ತಾವು ಆರ್ಡರ್ ಮಾಡಿ, ನಾವು ಎಕ್ಸಿಕ್ಯೂಟ್ ಮಾಡುತ್ತೇವೆ. ಬಿಲ್ ಕೊಟ್ಟಾಗ ದುಡ್ಡು ಕೊಡುವುದಕ್ಕೆ ನೀವು ಹಣ ಪ್ರೊವೈಡ್ ಮಾಡಿ. ಈಗ ಸಂಸ್ಥಾನದ ನಾನಾ ಕಡೆಗಳಿಂದ ವಿದ್ಯುಚ್ಛಕ್ತಿ ಕೊಡಿಸಬೇಕೆಂದು ಮನವಿಗಳು ಬಂದು ಎಸ್ಟಿಮೇಟ್ ಆಗಿ 5-10 ವರ್ಷಗಳಾಗಿವೆ, ಕೆಲಸ ಆಗಿಲ್ಲ. ಒಂದರಲ್ಲಿ 1925ನೇ ಇಸವಿಯಿಂದಲೂ ನಿಂತು ಹೋಗಿದೆ. ಅದಕ್ಕೆ ಇದುವರೆಗೂ ಹಣ ಕೊಡುವುದಕ್ಕೆ ಆಗಿಲ್ಲ. ಈ ವರ್ಷ ತೆಗೆದುಕೊಳ್ಳಬೇಕೆಂದು ಒಂದು ಅಭಿಪ್ರಾಯವಿದೆ, ಅಂಥಾದ್ದರಲ್ಲಿ.........................

ಒಬ್ಬ ಸದಸ್ಯರು.—ಅದು ಯಾವುದು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೆಸರು ಹೇಳಬಾರದು, ಹೆಸರು ಹೇಳಿದರೆ ಚೆನ್ನಾಗಿರುವುದಿಲ್ಲ. 4-5 ವರ್ಷ ಆಗಿರುವುದನ್ನು ಆದಷ್ಟು ಶೀಘ್ರವಾಗಿ ನಡೆಸಬೇಕೆಂದು ಅಭಿಪ್ರಾಯವಿದೆ. ಅನೇಕ ಮಹನೀಯರಿಗೆ ಉತ್ತರ ಹೇಳುವಾಗ ಬಹಳ ದುಃಖದಿಂದ ಹೇಳುತ್ತೇನೆ: ನಾನು ಮಂತ್ರಿಯಾಗಿ ಕುಳಿತುಕೊಂಡಿದ್ದರೂ ಹಳ್ಳಿಯವರ

ಸೇವೆ ಯಾವ ರೀತಿ ಮಾಡಬೇಕೆಂಬುದನ್ನು ತಿಳಿದುಕೊಂಡಿದ್ದೇನೆ, ಆದರೆ ಮಾಡುವುದಕ್ಕೆ ಹಣವಿಲ್ಲ, ಹಣದ ಅಭಾವದಿಂದ ಯಾವ ಕೆಲಸ ಮಾಡುವುದಕ್ಕೂ ಆಗುವುದಿಲ್ಲ. ಅದಕ್ಕೆ ತಾವು ಯಾವ ರೀತಿಯಲ್ಲಾದರೂ ಹಣದ ಒಂದು ಪರಿಹಾರವನ್ನು ಒದಗಿಸುವುದಾದರೆ ತಕ್ಷಣ ಕೆಲಸಮಾಡಿಕೊಡುತ್ತೇವೆ ಎಂದು ಹೇಳಿ ಅವರಲ್ಲಿ ಬಹಳ ವಿನಯದಿಂದ ಅರಿಕೆ ಮಾಡಿಕೊಂಡಿದ್ದೇನೆ. ದೊಡ್ಡ ದೊಡ್ಡ ಶಿಫಾರಸುಗಳನ್ನು ತೆಗೆದುಕೊಂಡು ಬರುತ್ತಾರೆ, ಅದನ್ನು ನೋಡಿ ದುಃಖ ಪಡುತ್ತೇನೆ. ನೀವು ಹಣ ಯಾವರೀತಿ ಒದಗಿಸುತ್ತೀರೋ ಅದೇರೀತಿ ಸೌಕರ್ಯಗಳನ್ನೂ ಕೂಡ ಒದಗಿಸಿಕೊಡುವುದಕ್ಕೆ ಸಿದ್ಧವಾಗಿದ್ದೇನೆ ಎಂದು ಅವರಿಗೆ ಹೇಳಿದ್ದೇನೆ. ಯಾವ ರೀತಿ ಆದರೂ ಸರಿಯೇ, ಎಲ್ಲಾ ಅಸೆಂಬ್ಲಿಯವರ ಕೈಯ್ಯಲ್ಲೇ ಇದೆ, ಹಣದ ಸಮಸ್ಯೆ ಪರಿಹಾರ ಮಾಡಿ ಜನಗಳಿಗೆ ನಿಜವಾಗಿಯೂ ವಿದ್ಯುಚ್ಛಕ್ತಿ ದೀಪದ ಪ್ರಕಾಶವನ್ನು ಒದಗಿಸುವುದಕ್ಕೆ ನಮ್ಮ ಇಲಾಖೆಯುವರು ಸದಾ ಸಿದ್ಧವಾಗಿದ್ದಾರೆ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈ ದೃಷ್ಟಿಯಿಂದ ಹಳ್ಳಿಯವರಾಗಲಿ, ಪಟ್ಟಣದವರಾಗಲಿ ಪಕ್ಷಪಾತವಿಲ್ಲದೆ ಸರ್ವರಿಗೂ ಸೌಕರ್ಯ ಒದಗಿಸತಕ್ಕ ನೀತಿ ಸರ್ಕಾರದ ನೀತಿಯಾಗಿದೆ. ಆ ನೀತಿಯ ಪ್ರಕಾರ—ಅನೇಕವೇಳೆ ಹೇಳಿದ್ದೇನೆ—ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟ್ರರಿಗೂ ಕೊಡಬೇಕು. ಆ ಮೇಲೆ ಸಾವಿರಕ್ಕಿಂತಲೂ ಹೆಚ್ಚಾಗಿ ಜನಸಂಖ್ಯೆಯಿರತಕ್ಕ ಹಳ್ಳಿಗಳಿಗೆ ಪ್ರಿಫರೆನ್ಸ್ ಕೊಡಬೇಕು. ಇನ್ನೊಂದು ರಹಸ್ಯ. ಅನೇಕರು ತಿಳಿದುಕೊಂಡಿರುವುದೇನೆಂದರೆ, ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನವರು ಸುಮ್ಮನೆ ಕೇಳಿದರೆ ಕೊಡುತ್ತಾರೆ, ಸ್ಯಾಂಕ್ಷನ್ ಆದರೆ ಸಾಕು ಎಂಬ ಭಾವನೆ ಇದೆ. ಆದರೆ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟನ್ನು ಸ್ವಲ್ಪ ಬಿಸಿನೆಸ್ ಲೈಕ್ ಆಗಿ ನೋಡಬೇಕು. ಅದು ಸ್ವಲ್ಪಮಟ್ಟಿಗೆ ಬಿಸಿನೆಸ್ ಡಿಪಾರ್ಟ್‌ಮೆಂಟ್ ಎಂದು ಇಟ್ಟುಕೊಳ್ಳಬೇಕು, It is a goose that lays golden eggs. ಬಡ್ಜೆಟ್ಟಿನಲ್ಲಿ ಈ ವರ್ಷ ನೋಡಿದರೆ ನೆಟ್ ಇನ್‌ಕಂ 1 ಕೋಟಿ 2 ಲಕ್ಷ ಚಿಲ್ಲರೆ ಏನೋ ಬಂದಿದೆ. ಅಂಥಾ ಬಾತನ್ನು ಏನೂ ಮಾಡುವುದಕ್ಕೆ ಹೋಗಬಾರದು, ಪ್ರೀತಿಯಿಂದ ಕಾಪಾಡಿಕೊಳ್ಳಬೇಕು. ಯಾವುದಾದರೂ ಒಂದು ಕೆಲಸ ಮಾಡಬೇಕಾದರೆ ಇನ್‌ವೆಸ್ಟ್‌ಮೆಂಟ್ ಎಷ್ಟಾಗುತ್ತದೆಯೋ ಅದರ ಮೇಲೆ ರಿಟರ್ನು 10% ಬರಬೇಕು. ಬರದೇ ಹೋದರೆ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನ ಬಂಡವಾಳವೆಲ್ಲಾ ಖರ್ಚಾಗುತ್ತದೆ.

ಶ್ರೀ ಎ ಭೀಮಪ್ಪ ನಾಯಕರು.—ಚಿನ್ನವನ್ನೇ ಏಕೆ ತೆಗೆಯುತ್ತೀರಿ. ಮುತ್ತು ರತ್ನ ಏಕೆ ತೆಗೆಯಬಾರದು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದರಲ್ಲಿ ಚಿನ್ನ ಬರಬೇಕಾದರೆ ಏನು ಹಾಕಿದರೆ ಚಿನ್ನ ಬರುತ್ತದೆಯೋ ಅದನ್ನು ಮಾತ್ರ ಹಾಕಿ. ಮುತ್ತು ರತ್ನ ಅದರಲ್ಲಿ ಬರುವುದಿಲ್ಲ. ಒಂದು ಲಕ್ಷ ರೂಪಾಯಿ ಇನ್‌ವೆಸ್ಟ್‌ಮೆಂಟ್ ಮಾಡಿದರೆ ಬಿಸಿನೆಸ್ ಪ್ರಕಾರ 4% ಆದರೂ ಇಂಟರೆಸ್ಟ್ ಎಂದು ತೆಗೆದುಕೊಳ್ಳಬೇಕು, ಕಂಬಗಳು, ಟ್ರಾನ್ಸ್‌ಫಾರ್ಮರುಗಳು ಇತ್ಯಾದಿಗಳಿಗೆ ಡಿಪ್ರಿಸಿಯೇಷನ್ 4% ತೆಗೆದಿಡಬೇಕು, ಅದರ ಮೇನ್‌ಟೆನೆನ್ಸ್‌ಗೆ 3% ಹೀಗೆ 10.9% ರಿಟರ್ನ್ ಬರಬೇಕು. ಇಲ್ಲದಿದ್ದರೆ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನ ಬಂಡವಾಳವೆಲ್ಲಾ ವರ್ಷೇ ವರ್ಷೇ ಕರಗಿಹೋಗುತ್ತದೆ. ಅನೇಕರಿಗೆ ಬಹಳ ಉದಾರಭಾವನೆಯಿಂದ, ಗ್ರಾಮಾಂತರ ಜನಗಳ ಮೇಲಿನ ಪ್ರೀತಿಯಿಂದ ಇದುವರೆಗೂ 2% ರಿಟರ್ನ್ ಇದ್ದರೂ ಎಲೆಕ್ಟ್ರಿಕ್ ಕರೆಂಟ್ ಕೊಟ್ಟಿದ್ದೇವೆ. ಯಾವತ್ತೂ ಕೂಡ ವಿದ್ಯುಚ್ಛಕ್ತಿ ಎಷ್ಟರಮಟ್ಟಿಗೆ ಸರಬರಾಯಿ ಆಗುತ್ತದೆಯೋ ಅಷ್ಟರಮಟ್ಟಿಗೂ ಗ್ರಾಮಾಂತರಗಳಿಗೆ ಒದಗಿಸಬೇಕೆಂಬ ಉದ್ದೇಶ ಇದೆ. ಆದರೆ ಆ ರಿಟರ್ನ್ ಮಾತ್ರ ಭದ್ರಪಡಿಸಿ ಕೊಡುವುದಕ್ಕೆ ತಾವೆಲ್ಲರೂ ಸಹಕಾರ ಕೊಡಬೇಕು. ಇಲ್ಲದಿದ್ದರೆ ಕಷ್ಟ. ನಮಗೆ ಬಹಳ ಉತ್ಸಾಹ ಇದೆ. ಎಲ್ಲಾದರೂ 3 ಅಥವಾ 6 ಕೋಟಿ ರೂಪಾಯಿಗಳ ಸಾಲವನ್ನಾದರೂ ಮಾಡಿ ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕೆಂಬ ಆಶೆ ಇದೆ. ಆದರೆ ರಿಟರ್ನ್ ಬರದಿದ್ದರೆ ಚಿನ್ನ ಕೊಡತಕ್ಕ ಆ ಖಾತೆ ಸತ್ತುಹೋಗುವಹಾಗಾಗುತ್ತದೆ. ಆ ದೃಷ್ಟಿಯಿಂದ ರಿಟರ್ನ್ ಬರಬೇಕೆಂಬುದನ್ನು ಗಮನಿಸಿ, ಯಾವ ಒಂದು ಅರ್ಜಿ ಆಗಲಿ, ಡಿಮ್ಯಾಂಡ್ ಆಗಲಿ ಮಾಡಬೇಕಾದರೆ ಅದನ್ನು ಜ್ಞಾಪಕವಲ್ಲಿಟ್ಟುಕೊಳ್ಳಬೇಕೆಂದು ಸಾರ್ವಜನಿಕರಿಗೆ ಅಪೀಲ್‌ಮಾಡಿಕೊಂಡು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಒಬ್ಬ ಸದಸ್ಯರು.—ಅದು ಮಾತ್ರ ಸಾಧ್ಯವಿಲ್ಲ.

ಶ್ರೀ ಟಿ. ಸಿದ್ದಲಿಂಗಯ್ಯನವರು.—ರಿಟರ್ನ್ ಇಲ್ಲದಿದ್ದರೆ, ನಾನು ಆಗಲೇ ಹೇಳಿದ ಪ್ರಕಾರ, ಬಾತೇ ಸತ್ತು ಹೋಗಬೇಕಾಗುತ್ತದೆ. ಆದ್ದರಿಂದ ಅದನ್ನು ಉಳಿಸಿಕೊಳ್ಳಿ. ಸರ್ಕಾರದವರು ಈ ವಿಷಯದಲ್ಲಿ ಯಾವತ್ತೂ ಸಹಾನುಭೂತಿಯನ್ನು ತೋರಿಸಿಕೊಂಡು ಬಂದಿದ್ದಾರೆ. ಹಾಗಿಲ್ಲದೆ ಹೋದರೆ ನಾವು ಮುಂದುವರಿಯುವುದಕ್ಕಾಗುವುದಿಲ್ಲ. ಇದುವರೆಗೆ ಸುಮಾರು 550 ಹಳ್ಳಿಗಳಿಗೆ ಎಲೆಕ್ಟ್ರಿಕ್ ದೀಪವನ್ನು ಒದಗಿಸಿದ್ದೇವೆ; ಸುಮಾರು 4,000 - 5,000 ಪಂಪ್ ಸೆಟ್ಟುಗಳನ್ನೊದಗಿಸಿ ಪವರ್ ಸರಬರಾಯಿ ಮಾಡಿದ್ದೇವೆ. ಆದರೆ ಇವುಗಳಿಂದ ನಮಗೆ ಸರಿಯಾಗಿ ಆದಾಯ (Return) ಬರುತ್ತಿಲ್ಲ. ಆದ್ದರಿಂದ ಇನ್ನು ಮೇಲಾದರೂ ಯಾವುದನ್ನು ಹೊಸದಾಗಿ ಮಂಜೂರು ಮಾಡಬೇಕಾದರೂ ನಮಗೆ ಬರಬಹುದಾದ ಆದಾಯವನ್ನು ದೃಷ್ಟಿಯಲ್ಲಿಟ್ಟುಕೊಂಡೇ ಕೊಡಬೇಕಾಗುತ್ತದೆ. ಈಗೇನೋ ನಮ್ಮ ಉತ್ಸಾಹದಲ್ಲಿ ಎಲ್ಲಾ ಊರುಗಳಿಗೂ ಪವರ್ ಸಪ್ಲೈ ಮಾಡಬೇಕು, ಎಲ್ಲರಿಗೂ ವಿದ್ಯುಚ್ಛಕ್ತಿ ಸೌಕರ್ಯ ಒದಗಿಸಬೇಕೆಂದು ಮಾಡಿದ್ದೇವೆ. ಅಂಥಾದ್ದರಲ್ಲಿ ಸರಿಯಾಗಿ ಆದಾಯ ಬರದೆ ಹೋದರೆ ಹೇಗೆ ಮುಂದೆ ಕೊಡುವುದು? ಆದ್ದರಿಂದ ತಾವುಗಳೆಲ್ಲರೂ ಈ ವಿಚಾರದಲ್ಲಿ ಅದಷ್ಟುಮಟ್ಟಿಗೆ ಸಹಕರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ಕತ್ತರಿ ನಿರ್ಣಯವನ್ನು ಮೈಸೂರು ಡಿಸ್ಟ್ರಿಕ್ಟಿನವರು ಏನು ತಂದಿದ್ದಾರೋ ಅದನ್ನು ಪರೀಕ್ಷೆಮಾಡಿ ಎಷ್ಟುಮಟ್ಟಿಗೆ ಕೊಡಬಹುದೋ ಅಷ್ಟುಮಟ್ಟಿಗೆ ಕೊಡುತ್ತೇವೆಂಬ ಭರವಸೆ ನೀಡುತ್ತೇನೆ. ಇದರ ಮೇಲೆ ಮಾನ್ಯ ಸದಸ್ಯರು ತಮ್ಮ ಕತ್ತರಿ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

Mr. SPEAKER.—I presume that the Hon'ble Minister for Industries has given this lengthy reply to this cut motion with a hope that the Members will not desire to have a general discussion on the main demand. There are many other cut motions and if you so desire, before the lunch hour, we will finish this demand.

Sri A. BHEEMAPPA NAIK.—I will suggest one thing, Sir. He wanted some suggestions as regards how to get the required money which he has not

(SRI A. BHEEMAPPA NAIK)

even disclosed and what attempt he has made. Therefore it is necessary that Members should offer suggestions as to how they could make money and what will be the minimum return that people could expect from them. Therefore it is necessary that Members should be given chance to speak, Sir.

Janab J. MOHAMED IMAM.—I am of the same view, Sir. These are all very important demands.

Sri U. M. MADAPPA.—I beg leave to withdraw my cut motion.

The cut motion was, by leave, withdrawn.

Harassment to Raiyats by Licensed Electric Contractors.

ಶ್ರೀ ಜಿ. ಪಾಪಣ್ಣನವರು (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).—Sir I move:

"The demand under the head 'XLI Receipts from Electricity Schemes-Working Expenses' for Rs. 80,45,000 be reduced by Rs. 100 (to raise a debate on the harassment caused by the licensed electric contractors to the raiyats."

ಸ್ವಾಮಿ, ಈ ಬೋತಾ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸುವ ಉದ್ದೇಶವೇನೆಂದರೆ, ಗ್ರಾಮಾಂತರ ಪ್ರದೇಶಗಳಲ್ಲಿ ರೈತರು ಇರಿಗೇಷನ್ ಪಂಪುಗಳನ್ನು ತೆಗೆದುಕೊಳ್ಳುವಾಗ ಕೆಲವು ಲೈಸೆನ್ಸ್ಡ್ ಕಂಟ್ರಾಕ್ಟರುಗಳಿಂದ ಏನು ತೊಂದರೆಯಾಗುತ್ತಿದೆಯೆಂಬುದನ್ನು ಈ ಸಭೆಯ ಮುಂದಿಡಬೇಕೆಂದು ತಂದಿದ್ದೇನೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ, ಈಗ ಇರಿಗೇಷನ್ ಪಂಪುಗಳಿಗೆ ಗ್ರಾಮಾಂತರ ಪ್ರದೇಶಗಳಿಂದ ಬಹಳ ಬೇಡಿಕೆಗಳೂ ಒತ್ತಾಯವೂ ಬರುತ್ತಿದೆ ಈ ಒತ್ತಾಯ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ಕೆಲವು ಎಲೆಕ್ಟ್ರಿಕ್ ಕಂಟ್ರಾಕ್ಟರುಗಳು ಈ ಇಲಾಖೆಯ ಕೆಲವು ಅಧಿಕಾರಿಗಳೊಡನೆ ಷಾಮೀಲಾಗಿ ಲಂಚ ಹೊಡೆಯುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಇದರಿಂದ ರೈತರಿಗೆ ಬಹಳ ವಿಧದಲ್ಲಿ ತೊಂದರೆಗಳುಂಟಾಗುತ್ತಿವೆ ಯಾವ ಎಲೆಕ್ಟ್ರಿಕ್ ಫಿಟಿಂಗ್ಸ್ ಮಾಡಬೇಕಾದರೂ ಈ ಲೈಸೆನ್ಸ್ಡ್ ಕಂಟ್ರಾಕ್ಟರುಗಳೇ ಮಾಡಬೇಕೆಂದಿರುವುದರಿಂದ, ಯಾವ ಎಲೆಕ್ಟ್ರಿಕ್ ಇನ್‌ಸ್ಟಲೇಷನ್‌ಗಳನ್ನಾದರೂ ಇವರುಗಳ ಮೂಲಕವಾಗಿಯೇ ಮಾಡಿಸಬೇಕಾಗಿದೆ. ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನಲ್ಲಿರುವ ಆಪರೇಟರುಗಳು ಲಂಚಕೋರತನಕ್ಕೆ ಮಾರು ಹೋಗಿ ಎಲ್ಲಾ ರೈತರಿಗೂ ತಮಗೆ ಬೇಕಾದ ಕೆಲವು ಕಂಟ್ರಾಕ್ಟರುಗಳ ಹತ್ತಿರಕ್ಕೆ ಹೋಗಬೇಕೆಂದು ಹೇಳಿ ಪ್ರೋತ್ಸಾಹ ಮಾಡುತ್ತಿರುತ್ತಾರೆ. ಸರ್ವೆ ಆಗುವುದಕ್ಕೆ ಮುಂಚೆ ಆ ರೈತನು ಈ ಕಂಟ್ರಾಕ್ಟರಲ್ಲಿಗೆ ಹೋಗಿ ಒಂದು ಒಪ್ಪಂದಕ್ಕೆ ರುಜು ಹಾಕಬೇಕಾಗಿರುತ್ತದೆ. ರೈತರಿಗೆ ಈ ಅಗ್ರಿಮೆಂಟಿನಲ್ಲಿ (ಒಪ್ಪಂದದ ಪತ್ರದಲ್ಲಿ) ಏನಿದೆ, ಏನಿಲ್ಲವೆಂಬುದು ಯಾವುದೂ ಗೊತ್ತಿರುವುದಿಲ್ಲ. ಅವನಿಗಿರುವ ಒಂದು ಆತುರವೇನೆಂದರೆ ವಿದ್ಯುಚ್ಛಕ್ತಿಯನ್ನು ಬೇಗ ಹೊಂದಬೇಕು ಎಂಬುದು. ಅಧಿಕಾರಿಗಳು ಹೇಳಿ ಗೊತ್ತುಮಾಡಿದ ಕಂಟ್ರಾಕ್ಟರಿಗೆ ತಾನು ಈ ಕೆಲಸವನ್ನು ವಹಿಸಿದರೆ ಆತನು ಮೇಲಿನ ಅಧಿಕಾರಿಗಳಲ್ಲಿಗೆ ಹೋಗಿ ಬೇಗಮಾಡಿಸಿಕೊಡುತ್ತಾನೆಂಬ ಆಸೆಯಿರುತ್ತದೆ. ಈ ರೀತಿಯ ಭಾವನೆಯಿಂದ ಆ ಕಂಟ್ರಾಕ್ಟ್‌ದಾರನಲ್ಲಿಗೆ ಹೋಗಿ ಆ ಅಗ್ರಿಮೆಂಟ್ ಫಾರಮ್ಮಿಗೆ ಅತ ರುಜುಹಾಕುತ್ತಾನೆ. ಪಾಪ! ಅವನಿಗೆ ಅದರ ಪರಿಣಾಮವೇನೆಂಬುದು ಯಾವುದೂ ಗೊತ್ತಿಲ್ಲ. ಅದೇ ಹೊಸದಾಗಿ ಅವನು ಇಂಥ ಪಂಪು ಹಾಕಿಸುತ್ತಿರುವುದರಿಂದ, ಸಾಮಾನುಗಳ ಪರಿಚಯ ಕೂಡ ಇಲ್ಲದಿರುವುದರಿಂದ, ಅವನಿಗೆ ಮೇಲು ಯಾವುದು, ಕೀಳು ಯಾವುದು, ಬೆಲೆಯೇನು — ಒಂದೂ ಗೊತ್ತಾಗುವುದಿಲ್ಲ. ಆದರೂ ಪಂಪನ್ನು ಬೇಗ ತೆಗೆದುಕೊಳ್ಳಬೇಕೆಂಬ ಉತ್ಸಾಹದಲ್ಲಿ ಅಧಿಕಾರಿಗಳ ಮಾತನ್ನು ಕೇಳಿ ಈ ಕಂಟ್ರಾಕ್ಟರಿಗೆ ಒಪ್ಪಂದ ಕೊಡುತ್ತಾನೆ. ಈ ಅವಕಾಶವನ್ನು ದುರುಪಯೋಗ ಪಡಿಸಿಕೊಂಡು ಆ ಎಲೆಕ್ಟ್ರಿಕ್ ಕಂಟ್ರಾಕ್ಟರು ಸಿಕ್ಕಿದ ಕೀಳು ದರ್ಜೆಯ ಸಾಮಾನುಗಳನ್ನು ಹಾಕಿ, ಹೆಚ್ಚಿಗೆ ದರ ಹಾಕಿ ಹಣವನ್ನು ವಸೂಲುಮಾಡುತ್ತಾನೆ. ಆಗಲೇ ತನ್ನ ಕಂಟ್ರಾಕ್ಟ್‌ದಾರನು ಎಂಥವನೆಂಬುದರ ಅರಿವು ಅವನಿಗಾಗುವುದು! ವ್ಯಾಜ್ಯ ಷುರುವಾಗುತ್ತದೆ. ಆಗ ವ್ಯಾಜ್ಯಮಾಡಿದರೂ ಏನೂ ಪ್ರಯೋಜನವಿರುವುದಿಲ್ಲ. ಒಂದು ಸಾರಿ ಆ ಕಂಟ್ರಾಕ್ಟ್‌ದಾರನ ಹಿಡಿತಕ್ಕೆ ಸಿಕ್ಕಿದ ಮೇಲೆ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಕೆಲಸವೆಲ್ಲಾ ಆಗಿದ್ದರೂ ಕಂಟ್ರಾಕ್ಟ್‌ದಾರನು ಒಪ್ಪಿ ಕಂಪ್ಲೀಷನ್ ರಿಪೋರ್ಟ್ ಕೊಡದೆ ರೈತನಿಗೆ ಸರ್ವಿಸ್ ಸಿಕ್ಕುವುದಿಲ್ಲ. ಹೀಗಿರುವಲ್ಲಿ ಕಂಟ್ರಾಕ್ಟ್‌ದಾರನೊಬ್ಬನ ಅವಶ್ಯಕತೆ ಎಷ್ಟಿದೆ ಎಂಬುದನ್ನು ಹೇಳಬೇಕಾಗಿಲ್ಲ. ಆದರೆ ವಾಸ್ತವವಾಗಿಯೂ ಅವನ ಆವಶ್ಯಕತೆಯಿದೆಯೇ? ಅವನು ಮಾಡುವುದಾದರೂ ಏನು? ಅವನೊಬ್ಬ ಬಂಡವಾಳಗಾರನಾಗಿ ತನ್ನ ಕೈಕೆಳಗೆ ಇಬ್ಬರು ಮೂವರು ವೈರ್‌ಮೆನ್‌ಗಳನ್ನಿಟ್ಟುಕೊಂಡು ಒಂದು ಲೈಸೆನ್ಸ್ ಪಡೆದುಕೊಂಡಿರುವವನು, ಅಷ್ಟೆ. ಎಲ್ಲಾ ಕೆಲಸವನ್ನೂ ಮಾಡುವವನು ವೈರ್‌ಮನ್ನು. ಕಂಟ್ರಾಕ್ಟ್‌ದಾರನ ಕೆಲಸವೆಲ್ಲಾ ದುಡ್ಡು ತೆಗೆದುಕೊಂಡು ರುಜುಹಾಕುವುದು, ಕಿರುಕುಳ ಕೊಡುವುದು, ಅಷ್ಟೆ. ಅಲ್ಲದೆ ಒಂದು ಇರಿಗೇಷನ್ ಪಂಪನ್ನು ಹಾಕಬೇಕಾದರೆ ಅಂಥಾ ಭಾರಿ fittings ಏನೂ ಇಲ್ಲ. ಸರಳವಾಗಿರುತ್ತದೆ. ಆದ್ದರಿಂದಲೇ ಕಂಟ್ರಾಕ್ಟ್‌ದಾರನ Completion ರಿಪೋರ್ಟ್ ಮೂಲಕವೇ ಸರ್ವಿಸ್ ಕೊಡಬೇಕೆಂದಿರುವುದನ್ನು ಬದಲಾಯಿಸಬೇಕೆಂದು ನಾನು ಹೇಳುತ್ತೇನೆ. ಈಗ ಹಳ್ಳಿಗಾಡುಗಳಲ್ಲಿ ಈ ಕಂಟ್ರಾಕ್ಟ್‌ದಾರರುಗಳು ಕೊಡುತ್ತಿರುವ ಈ ಕಿರುಕುಳವನ್ನು ತಪ್ಪಿಸಿದರೆ ಬಹಳ ಒಳ್ಳೆಯ ಕೆಲಸಮಾಡಿದಂತಾಗುತ್ತದೆ. ಪರೀಕ್ಷೆಮಾಡಬೇಕೆಂದರೆ, ನಮ್ಮ ಚಿಕ್ಕಬಳ್ಳಾಪುರದ ಕಡೆ ಬೇಕಾದಷ್ಟು ಸಂದರ್ಭಗಳನ್ನು ಹೇಳುತ್ತೇನೆ. ಕೆಲವು ಜಿಲ್ಲೆಗಳಲ್ಲಿ ಎರಡೆರಡು ತಾಲ್ಲೂಕಿನವರು ಒಬ್ಬರೇ ಕಂಟ್ರಾಕ್ಟರಿಗೆ ಕೊಡುತ್ತಿರುತ್ತಾರೆ. ಬೇರೆಯವರನ್ನು ಕೇಳುವವರೇ ಇರುವುದಿಲ್ಲ. ಮೇಲ್ಪಟ್ಟ ಅಧಿಕಾರಿಗಳೂ ಕೂಡ ಆ ಕಂಟ್ರಾಕ್ಟರುಗಳ ಮೂಲಕ ಕೆಲಸವನ್ನು ಬೇಗಮಾಡಿಕೊಡುತ್ತಾರೆ. ಆದರಿಂದ ಯಾವ ಕಂಟ್ರಾಕ್ಟರ ಮೂಲಕ ಹೋದರೆ ಬೇಗ ಕೆಲಸವಾಗುತ್ತದೆಯೋ ಆ ಕಂಟ್ರಾಕ್ಟರ ಹತ್ತಿರವೇ ಎಲ್ಲರೂ ಹೋಗಬೇಕಾಗುತ್ತದೆ. ಪ್ರೈಯಾರಿಟಿ ಪ್ರಶ್ನೆ ಬಂದು

ಯಾರಾದರೂ ತಮ್ಮ ಕೆಲಸವನ್ನು ಬೇಗ ಮಾಡಿಕೊಂಡಿರುವುದಕ್ಕೆ ಕಾರಣ ಕೇಳಿದರೆ, ಅದು technical ವಿಷಯ, ಟ್ರಾನ್ಸ್‌ಫಾರ್ಮರ್ ಹೆಚ್ಚಿಗೆ ಲೋಡ್ ತೆಗೆದುಕೊಳ್ಳುವುದಿಲ್ಲ—ಎಂದು ಏನಾದರೊಂದು ಸಬೂಬ್ ಹೇಳಿಬಿಡುತ್ತಾರೆ. ಆದರೆ ಸೂಕ್ಷ್ಮವಾಗಿ ಇಂಥವುಗಳನ್ನು ಪರೀಕ್ಷಿಸಿದರೆ ಇದರ ಹಿನ್ನಲೆಯಲ್ಲಿ ಲಂಚಕೋರತನ ಅಡಗಿರುವುದು ಗೋಚರವಾಗುತ್ತದೆ. ಇವರ ಬುದ್ಧಿ ಚಾತುರ್ಯ ಎಷ್ಟರಮಟ್ಟಿಗಿದೆಯೆಂದು ಹೇಳುವುದಕ್ಕೆ ಅಸಾಧ್ಯ. ಎಷ್ಟೋವೇಳೆ ತಮಗೆ ಬೇಕಾದ ಕಂಟ್ರಾಕ್ಟುದಾರರ ವಿಷಯದಲ್ಲಿ ಆರು ತಿಂಗಳ ಹಿಂದಿನಿಂದಲೇ ಪ್ಲಾನ್ ಹಾಕಿಕೊಂಡು, ಒಂದು ಜಾಗಕ್ಕೆ ಕಡಮೆ ಟ್ರಾನ್ಸ್‌ಫಾರ್ಮರಿನಿಂದ ಆಗುವ ಹಾಗಿದ್ದರೂ ಬೇಕೆಂತಲೇ ಆ ಜಾಗಕ್ಕೆ ಒಂದು ದೊಡ್ಡ ಟ್ರಾನ್ಸ್‌ಫಾರ್ಮರ್ ಹಾಕುತ್ತಾರೆ. ಹೀಗೆ ಹಾಕುವುದರಿಂದ ಉಳಿಯುವ ಟ್ರಾನ್ಸ್‌ಫಾರ್ಮರ್ ಲೋಡಿನಿಂದ ಅಲ್ಲಿಂದಲೇ ಪವರ್ ತೆಗೆದುಕೊಂಡು ತಮಗೆ ಬೇಕಾದವರಿಗಾದರೆ ಸುಲಭವಾಗಿ ಕೆಲವು ದಿವಸಗಳಲ್ಲೇ ಸರ್ವಿಸ್ ಕೊಡುತ್ತಾರೆ. ಈ ರೀತಿಯಾಗಿ ಅನೇಕ ವಿಧದಲ್ಲಿ ಹಿಂದು ಮುಂದು ಮಾಡಿಬಿಡುತ್ತಾರೆ. ಆದ್ದರಿಂದ ಇದನ್ನೆಲ್ಲಾ ಪರೀಕ್ಷೆ ಮಾಡಬೇಕಾದರೆ ಬಹಳ ಎಚ್ಚರಿಕೆಯಿಂದ ನೋಡಬೇಕು. ಈ ಎಲ್ಲಾ ಅಂಶಗಳನ್ನೂ ಗಮನಕ್ಕೆ ತೆಗೆದುಕೊಂಡು ಇಂಥ ಲೈಸೆನ್ಸ್‌ಡ್ ಕಂಟ್ರಾಕ್ಟರುಗಳ ಅವಶ್ಯಕತೆ ನಿಜವಾಗಿಯೂ ಇದೆಯೇ, ಅವರುಗಳಿಂದಲೇ ಕಂಪ್ಲೀಷನ್ ರಿಪೋರ್ಟ್ ತರಬೇಕೆಂಬುದು ಆವಶ್ಯಕವೇ ಎಂಬುದನ್ನು ಪುನರ್ವಿಮರ್ಶಿಸಬೇಕೆಂದು ನಾನು ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Cut motion moved:

"That the demand be reduced by Rs. 100"

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅಧ್ಯಕ್ಷರೇ, ಈ ಖೋತಾ ನಿರ್ಣಯದಲ್ಲಿ ಅವರು ಸರ್ವೇ ಸಾಧಾರಣವಾಗಿ ಹೇಳಿದ್ದಾರೆಯೇ ಹೊರತು ನಿರ್ದಿಷ್ಟವಾಗಿ ಯಾವ ನಿದರ್ಶನಗಳನ್ನೂ ಸಭೆಯ ಗಮನಕ್ಕೆ ತರಲಿಲ್ಲ. ಲೈಸೆನ್ಸ್ಡ್ ಕಂಟ್ರಾಕ್ಟರುಗಳು ಜನಗಳಿಗೆ ಬಹಳ ಕಿರುಕುಳ ಕೊಡುತ್ತಿದ್ದಾರೆ ಎಂಬ ವಿಷಯವನ್ನು ಚರ್ಚೆಮಾಡುವುದು ಈ ಖೋತಾ ನಿರ್ಣಯದ ಉದ್ದೇಶ. ಅವರು ಹೇಳಿದ್ದರಲ್ಲಿ, ಸರ್ವೇ ಸಾಮಾನ್ಯವಾಗಿ ಎಲ್ಲರೂ ಲಂಚ ತೆಗೆದುಕೊಳ್ಳುತ್ತಿದ್ದಾರೆ, ಕಂಟ್ರಾಕ್ಟರುಗಳು ನಿರಾತಂಕರಾಗಿದ್ದಾರೆ, ಇಲಾಖಾಧಿಕಾರಿಗಳೂ ಕಂಟ್ರಾಕ್ಟರುಗಳಿಗೆ support ಆಗಿ ಕೆಲಸಮಾಡುತ್ತಿದ್ದಾರೆ ಎಂದು ಗೊತ್ತಾಗುತ್ತದೆ. ಈ ರೀತಿಯಾಗಿ ಜನಗಳಿಗೆ ಕಿರುಕುಳ ಕೊಡುತ್ತಿರಬಹುದೆಂಬುದನ್ನು ಒಪ್ಪುತ್ತೇನೆ.

ಆದರೆ ಡಿಪಾರ್ಟ್‌ಮೆಂಟಿನ ದೃಷ್ಟಿಯಿಂದ ನಾನು ಹೇಳುವುದೇನೆಂದರೆ, ಕಂಟ್ರಾಕ್ಟ್ ಮಾಡತಕ್ಕವರು ಲೈಸೆನ್ಸ್ಡ್ ಕಂಟ್ರಾಕ್ಟರುಗಳು ಹೌದೇ ಅಲ್ಲವೇ ಎಂಬುದನ್ನು ನೀವು ನೋಡಿಕೊಡಬೇಕು. ಏಕೆಂದರೆ ಲೈಸೆನ್ಸ್ಡ್ ಕಂಟ್ರಾಕ್ಟರುಗಳ ಮೇಲಾದರೆ ಸರ್ಕಾರದವರ ಅಧಿಕಾರ ಇದೆ. ಅವರು ಯಾವ ರೀತಿಯಲ್ಲಾದರೂ ಕಿರುಕುಳ ಕೊಟ್ಟರೆ ಅವರ ಲೈಸೆನ್ಸನ್ನು ವಜಾ ಮಾಡುವ ಅಧಿಕಾರ ಸರ್ಕಾರದವರಿಗಿದೆ. ಎರಡನೆಯದಾಗಿ, ಈ ಕಂಟ್ರಾಕ್ಟರುಗಳೆಲ್ಲರೂ ಆಫೀಸರುಗಳನ್ನು ಒಳಹಾಕಿಕೊಂಡು ಸಂಪಾದನೆ ಮಾಡುತ್ತಿದ್ದಾರೆಂದು ಹೇಳಿದರು. ಇಂಥ ವಿಷಯಗಳಲ್ಲಿ ನಿರ್ದಿಷ್ಟವಾದ ಯಾವುದಾದರೂ ನಿದರ್ಶನಗಳನ್ನು ನಮ್ಮ ಗಮನಕ್ಕೆ ತಂದಿದ್ದರೆ ಚೆನ್ನಾಗಿತ್ತು. ಹಾಗಿಲ್ಲದೆ ಸರ್ವೇಸಾಮಾನ್ಯವಾಗಿ ಸುಮ್ಮನೆ ಎಲ್ಲರೂ ಹೀಗೆ ಮಾಡುತ್ತಿದ್ದಾರೆಂದರೆ ಯಾರಿಗೂ ಏನೂ ಪ್ರಯೋಜನವಿಲ್ಲ.

ಶ್ರೀ ಜಿ. ಪಾಪಣ್ಣನವರು.—ಬೇಕಾದರೆ ನಾನು ಹೆಸರುಗಳನ್ನು ಕೊಟ್ಟು ತಿಳಿಸಬಲ್ಲೆ.

ಶ್ರೀ ಕೆ. ವಿ. ಶಂಕರಗೌಡರು (ಮಂಡ್ಯ).—We cannot become C. I. D's like that. ಇಂಥವರು ಲಂಚ ತೆಗೆದುಕೊಳ್ಳುತ್ತಾರೆ, ಇಂಥವರು ತೆಗೆದುಕೊಳ್ಳುವುದಿಲ್ಲವೆಂದು ನಾವು ಹೇಳುವುದಕ್ಕಾಗುವುದಿಲ್ಲ. ಸರ್ಕಾರದವರು ಸಿಬ್ಬಂದಿಯನ್ನು ನೇಮಕ ಮಾಡಿ ಅಂಥವರನ್ನು ಕಂಡುಹಿಡಿಯಬೇಕಾದದ್ದು ಅವರ ಕರ್ತವ್ಯ. ಅಲ್ಲದೆ ಇದರಿಂದ ತೆಗೆದುಕೊಂಡವರ ದ್ವೇಷಕ್ಕೂ ನಾವು ಗುರಿಯಾಗಬೇಕಾಗುತ್ತದೆ.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಮೂರನೆಯದಾಗಿ, ಕಂಟ್ರಾಕ್ಟರುಗಳನ್ನು ನೇಮಕಮಾಡಿಕೊಳ್ಳುವುದರಲ್ಲೂ ಒಬ್ಬರ ಹತ್ತಿರಕ್ಕೇ ಹೋಗಬೇಡಿ. ನಾಲ್ಕು ಜನರಿಂದ ಟೆಂಡರು ಕರೆದು, ಯಾರ ದರಗಳು ಸರಿಯಾಗಿ ಕಾಣುತ್ತವೆಯೋ ಅವರಿಗೆ ಕೊಡಿ. ಅವರು ಹೀಗೆ ಒಪ್ಪಿಕೊಂಡು ಆಮೇಲೆ ಅದರಂತೆ ಕೆಲಸಮಾಡದೆ ಹೋದರೆ ಕಂಪ್ಲೇಂಟ್ ಕೊಡಿ, ಅದನ್ನು ನಾವು ವಿಚಾರಿಸುತ್ತೇವೆ. ಹೀಗೆ ನಾನು ಹೇಳಿದಂತೆ ಮೂರು ರೀತಿಯಲ್ಲಿ ನಡೆದರೆ Harassmentನ್ನು ತಪ್ಪಿಸಬಹುದು.

ಇನ್ನು ಲಂಚವನ್ನು ನಿರೋಧಗೊಳಿಸುವ ವಿಚಾರದಲ್ಲಿ ಸರ್ಕಾರದವರು ಏನೇನು ಏರ್ಪಾಡುಗಳನ್ನು ನಡೆಸಬೇಕೋ ಅದನ್ನೆಲ್ಲಾ ಮಾಡಿದ್ದಾರೆ. ಲಂಚವನ್ನು ಕಂಡುಹಿಡಿಯುವುದಕ್ಕೆ ಯಾರೂ ಗೂಢಚಾರರಾಗಿ ವರ್ತಿಸಬೇಕೆಂದು ನಾನು ಹೇಳುವುದಿಲ್ಲ. ಅದನ್ನು ಹುಡುಕುವುದಕ್ಕೆ ಯಾರನ್ನೂ C. I. D. ಗಳಾಗಿ ಕಳುಹಿಸಬೇಕಾಗಿಲ್ಲ. ಯಾರ್ಯಾರಿಗೆ ಕಿರುಕುಳವಾಗುತ್ತದೆಯೋ ಅವರೊಂದು ಅರ್ಜಿ ಬರೆದರೆ ಸಾಕು. ನಾವು ಮುಂದಿನ ಕೆಲಸವನ್ನು ನಡೆಸುತ್ತೇವೆ. ಆದರೆ ಈಗಿರುವ ತೊಂದರೆಯೇನೆಂದರೆ, ಅನೇಕರು ಏನೇ ಕಿರುಕುಳವಿದ್ದರೂ ಅದನ್ನು ಸಹಿಸಿಕೊಂಡೇ ಸುಮ್ಮನಿರುತ್ತಾರೆ. ಅದೇ ತಪ್ಪು. ಅನೇಕರು ತಾವು ಲಂಚ ಕೊಟ್ಟಿರುತ್ತಾರೆ. ಆದರೆ ಲಂಚ ಕೊಟ್ಟಿದ್ದನ್ನು ಬಂದು ಹೇಳಿ evidence ಕೊಡಿ ಎಂದು ಎಷ್ಟು ಹೇಳಿದರೂ ಕೊಡುವುದಿಲ್ಲ. ಇದು ಸರ್ಕಾರದವರಿಗಿರುವ ಮುಖ್ಯ ಕಷ್ಟ.

ಈ ರೀತಿಯಾಗಿ ಲಂಚ, ಕಿರುಕುಳಗಳನ್ನು ತಪ್ಪಿಸುವುದಕ್ಕೆ ಮೂರು ವಿಧಾನಗಳನ್ನು ಹೇಳಿದ್ದೇನೆ. ಆದ್ದರಿಂದ ತಾವು ಯಾವುದಾದರೂ Specific instances ಕೊಟ್ಟು ಸ್ವಲ್ಪ Harassment ಆಗುವುದಾಗಲಿ, ತಡವು ಮಾಡುವುದಾಗಲಿ ತೋರಿಬಂದರೆ ಅದನ್ನು ತಿಳಿಸಿದರೆ ತಕ್ಕ ವಿಚಾರಣೆಮಾಡುತ್ತೇವೆಂದು ನಾನು ಭರವಸೆಕೊಡುತ್ತೇನೆ. ಇದರಮೇಲೆ ಮಾನ್ಯ ಸದಸ್ಯರು ತಮ್ಮ ಖೋತಾ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇವೆ.

ಶ್ರೀ ಜಿ. ಪಾಪಣ್ಣನವರು.—ನಾನು ಕತ್ತರಿ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

The cut motion was, be leave withdrawn.

10-30 A.M.

Supply of Power to Flour and other Mills and Hotels.

Sri M. PALANIYAPPAN (Ulsoor).—Sir, I move:

"That the demand under the head "XLI. Receipts from Electricity Schemes—Working Expenses" for Rs. 80,45,000 be reduced by Rs. 100 (to bring to the notice of the Government that power is not supplied to the flour mills and other mills and hotels)."

Sir, while moving this cut motion, my idea is to bring home to the Government that there are hundreds and hundreds of flour mill licence holders in the Corporation Area. Every year, they are paying Rs. 50 as licence fee, for nothing at all, to the Corporation just to maintain their licence whether they run the mills or not. Many a time these licence holders within the Corporation area approached the Government Electrical Department for power and they generally say they do not have enough transformers, no power and such kind of answers. There are instances where people who applied five or six years ago have not yet received power supply. Speaking for my area, I can quote many instances, and about 100 applicants are still in the waiting list. These people, for no fault of theirs, are made to pay this licence fees to the Corporation and so I request the Government to see that these applicants are supplied with electricity as early as possible.

Now coming to hotels, it is a well-known fact that if only electricity is used for heating purposes in hotels, a lot of fire-wood will be saved and thereby we can save our forests which in turn could ensure plentiful rainfall. It is only for the use of the City and other urban areas that large extents of forests have to be exploited for supplying fire-wood which could be saved if electricity is supplied to hotels. So I earnestly request Government to see that they take immediate steps to supply electricity for these flour mills and hotels. Thank you Sir.

Mr. SPEAKER.—Cut motion moved:

"That the demand be reduced by Rs. 100."

Sri T. SIDDALINGAIYA.—Sir, in this cut motion the mover has made a most unfounded allegation. The cut motion says: 'to bring home to the Government that power is not supplied to flour and other mills and hotels'. Is it a fact? No (laughter). However, I will reply to some points he has raised. He has answered most of the questions that he has raised. So, there is not much for me to say. However, for the information of Sri Palaniyappan and the public I submit this: whenever power is applied for, sanction is given straightaway. What happens is, where there are some bottlenecks for want of materials, in such cases power supply will be delayed. There are certain rules also that guide the supply of power. Preference is always given to irrigation and secondly for other purposes. Where there are many applicants preference will be given according to the time of receipt of applications. Therefore I submit Sri Palaniyappan has no case at all.

Sri M. PALANIYAPPAN.—There is no necessity to supply power for irrigation purposes in my constituencies, Sir. However I beg leave to withdraw my cut motion.

The cut motion was, by leave, withdrawn.

Sri Mulka GOVINDA REDDY.—I rise to oppose the Demand Sir.

Mr. SPEAKER.—Does the Hon'ble Member feel it necessary to do so. The Hon'ble Minister has made a lengthy reply regarding other cut motions.

Sri Mulka GOVINDA REDDY.—I will take only five minutes Sir.

Mr. SPEAKER.—If I give the Hon'ble Member a chance, others also will be entitled to say what they wish to say. That takes away half-an-hour. It is therefore left to you to speak or not. There are yet 7 Demands more to be covered and we have only one hour and fifteen minutes before us.

Sri Mulka GOVINDA REDDY.—All right Sir, I do not press.

Mr. SPEAKER.—The question is:

"That a sum not exceeding Rs.80,45,000 be granted to the Government to complete the sum necessary to defray the charges which will come in course of payment during the year ending 31st day of March 1953 in respect of 'Receipts from Electricity Schemes-Working Expenses."

The motion was adopted.

Mr. SPEAKER.—The House will now adjourn for lunch and re-assemble at 11-10 A.M.

The Assembly adjourned for Lunch at Forty Minutes past Ten of the Clock and reassembled at Ten Minutes past Eleven of the Clock.

[MR. SPEAKER in the Chair.]

Demand No. 39—Road Transport Schemes.

XLVI—A. RECEIPTS FROM ROAD TRANSPORT SCHEMES—WORKING EXPENSES.

Mr. SPEAKER.—Motion moved:

"That a sum not exceeding Rs. 22,77,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'Receipts from Road Transport Schemes—Working Expenses'."

Working of the Government Road Transport Scheme.

Sri S. SRINIVASA IYENGAR (T.-Narasipur).—Sir, I move:

"That the demand under the head 'XLVI-A. Receipts from Road Transport Schemes—Working Expenses' for Rs. 22,77,000 be reduced by Rs. 100 (to raise a debate on the working of the Government Road Transport Scheme)."

Mr. SPEAKER.—I do not think there will be any necessity to move cut motion No. 17.

Sri S. SRINIVASA IYENGAR.—I agree. Sir, while moving the cut motion, I beg to place before this House a few of the following points about the working of the Road Transport Scheme in our State. The Road Transport Scheme was introduced in the year 1948. The total amount so far invested is Rs. 26.91 lakhs. 180 buses are owned by Government, out of which 104 only are in running order and 6 have already been condemned. From these services the Government have realised a profit of Rs. 5·29 lakhs for all these years, that is, 4 years, but when we look at the figures I find that in the year 1950-51, according to the accounts, there is actually a loss of Rs. 20,000. In 51-52 the profit from this scheme is about Rs. 26,230. I ask the Government whether they consider it worthwhile to invest Rs. 26 lakhs and to get a return of only Rs. 23,000. While the State has loans for which they have to pay interest charges of nearly Rs. 53.15 lakhs at various percentages ranging from 3 to 5 and when they, while investing in the Road Transport Scheme, are not able even to get one per cent, is it still worthwhile to maintain the scheme? I submit that even though in the present Budget it is anticipated that we may get Rs. 1·5 lakhs as profit, I feel we may not get it. In addition to that, I submit, Sir, that these buses generally have a life of just about five years. For our investment of Rs. 26 lakhs we must have built up by this time a depreciation fund equal to that amount so that we could replace those condemned buses. But looking at the statement as it stands on the 31st March 1952, I find we have a depreciation fund of Rs. 4·95 lakhs which is not even enough to cover the purchase of about 10 buses. So I submit that if this scheme is continued, we will lose the entire capital and our revenue would be too little compared to the investment. I submit Sir, that on an analysis you will see that for each bus per day you are able to get just Rs. 4 as profit. I

(SRI S. SRINIVASA IYENGAR)

can never understand this position, that for running a bus for about 100 miles and odd we are able to get a profit of just, to be very accurate, Rs. 3-15-1 per day for all this journey. Therefore, I submit that the Road Transport Scheme is a dead failure and I am sure the rate payers lose the entire amount by continuation of the scheme. I submit that we have a very huge establishment and we are spending more money towards this. I have alternative schemes worked out here, but unfortunately I have very little time to place the same before this House. I will take some other opportunity of dealing with that scheme. Now having placed before this House the futility of continuing a scheme whereby you always continue to lose, I submit that I have alternate suggestions. Having undertaken the scheme of road transport, I go a step further in stating that such transport schemes or these communications may be created as a monopoly of the State and like excise sales, every line may be auctioned. By working a detailed programme I can assure this House that the Government of Mysore will derive a revenue of nearly Rs. 40 lakhs by such sales without spending even a single pie. At present, I feel that on many routes a large number of buses are plying without yielding even the working expenditure to many bus owners. This has resulted in the ruination of many innocent people. In addition to that, roads have been damaged beyond recognition. Therefore, I submit that to augment the resources of the State and also to prevent people from unnecessary competition the Government may be pleased to create monopoly and auction all lines for a term of 3 or 5 years. That would yield good revenue. You will have enough of money to maintain the roads; we can save lot of worry. The purpose with which the Road Transport Scheme was introduced was to give relief to the travelling public. Has it been extended now? Is it in operation? It is not so. Almost in many of these buses wherein you have the standing accommodation you have not the means to support yourself while standing. You have not got the straps attached to some of these buses and even on the floor as it is you have got the stepney deposited there and the difference of height between the top and the floor of the bus is just about 4½ feet wherein no man can really stand.

The provision of standing accommodation is absolutely not correct. The Government's plea is that standing accommodation is provided for out passengers. But in actual practice, many long distance passengers, do stand, and as they cannot stand all along they squat on the dirty floor. In addition to that, in some of these buses passengers who are permitted to occupy will not have the seats inside the buses. Therefore, Sir, it is best and it is in the interest of the common man to wind up this scheme, auction these lines and still get revenue for the improvement of the common man.

Mr. SPEAKER.—Cut motion moved.—

"That the demand be reduced by Rs. 100".

Sri H. SIDDAVEERAPPA (Minister for Agriculture and Home Affairs).—Mr. Speaker, Sir, I do not know whether I will be right in making a general survey of the whole thing in this cut motion. As the cut motion is so broad-based as to cover all the points that my learned friend conceived of while attacking the Government on its Road Transport policy.........

Janab J. MOHAMED IMAM (Jagalur) —I wish to make a suggestion, Sir. The Minister may make a general survey when the demand as a whole is taken up, as some of us are anxious to speak on this demand. There is only one more cut motion in my name on this demand. I will not move it. Then we can speak on the whole demand.

Mr. SPEAKER.—That is cut motion No. 17. It is already understood that it is not going to be moved.

Janab J. MOHAMED IMAM.—When the whole demand is put to vote, I will oppose and say a few words.

Mr. SPEAKER.—But there are still so many other cut motions under the demand.

Sri H. SIDDAVEERAPPA.—The points raised by my learned friend are so many that while replying to those points, it may as well mean that I am making a general survey. However, I will leave it to your discretion, Sir, whether I can stop at this stage and answer the points now raised also when the whole demand is taken up for discussion. I think that will facilitate matters, because it may mean avoiding the overlapping of several facts and figures which I would like to give in order to allay the suspicions of my learned friend with regard to the working of the system. Anyhow I leave it to you, Sir.

Mr. SPEAKER.—So far as this cut motion is concerned, the Minister will have to reply.

Sri H. SIDDAVEERAPPA.—My learned friend's argument was that the return was not commensurate with the capital that we have invested in the Road Transport. So far as that position is concerned, he gave figures rather with mathematical precision up to the decimal point by saying that that would be our return. I would like to bring to the notice of this House that after the Road Transport Scheme was introduced in the State, out of 179 buses, we have now got 107 in operation. The current lines are 68 covering 11,363 miles per day. The total capital investment in 1950-51 comes to Rs. 26,91,165. Sir, in 1948-49 our net income was Rs. 2,64,214.

Sri S. SRINIVASA IYENGAR.—Was depreciation provided for in 48-49?

Sri H. SIDDAVEERAPPA.—I may be permited to say to the satisfaction of my Hon'ble friend that depreciation was not only provided for but fully and adequately provided, after paying taxes, road cess, etc.

Sri L. SIDDAPPA (Channagiri).—And also the interest on the capital!

Sri T. MARIAPPA (Mysore).—When you get net receipts, it is much more than the interest.

Sri H. SIDDAVEERAPPA.—I would like to say that up to the end of March 1952, we have built up reserves to the tune of Rs. 18,68,844. That means very nearly more than half or three-fourths the amount we have invested on this, and not Rs. 3 and odd a day as my learned friend put it on his own calculation. The net profit for 1949-50 amounted to Rs. 2,65,749; in 1950-51 it was Rs. 28,104 and in 1951-52 it was Rs. 26,230; whereas the House may be pleased to see that in 1948-49 the depreciation amount was Rs. 1,69,472.

Sri L. SIDDAPPA.—At what percentage, Sir?

Sri H. SIDDAVEERAPPA.—In the neighbourhood of twenty per cent, if I remember correct.

In 1949-50, the depreciation amount was Rs. 3,25,526. In 1950-51 we allowed Rs. 6,32,846. In 1951-52 we set apart a depreciation amount of Rs. 7,41,000 out of the gross earnings. I think my friend will note these figures. With regard to other funds, even in 1948-49 we had Rs. 20,000; in 1949-50 it was Rs. 30,000. In 1950-51 it was Rs. 61,800 and in 1951-52 it was Rs. 61,800. With regard to income, I may just give a few figures for the edification of my friend. In the month of May 1951, our receipt figure was Rs. 2,91,917 and in May 1952 it was Rs. 3,46,891. In June 1951 it was Rs. 2,60,377 and in June 1952 it was Rs. 3,30,231. These figures are given just to show that the department is pruning up and is trying to improve its receipts.

In this connection it may not be out of place to refer to the yeoman services rendered by my predecessor in getting up the present workshop. We have got a model workshop, one to be envied. This workshop is going to play a very large part in the improvement and toning up in the matter of the running of our bus services up-to-date and on model lines. For this workshop we have invested Rs. 77,353 on tools and plant, and for buildings Rs. 1,97,536 and for machinery Rs. 66,870. There is one other reason why we have had a slightly small income by way of gross receipts. If it is looked into by my friend with regard to some of these materials and the soaring costs, he will

(SRI H. SIDDAVEERAPPA)

try to understand what the reasons are for the slightly small gross receipts.

Sri S. SRINIVASA IYENGAR.—The bus rates were enhanced.

Sri H. SIDDAVEERAPPA.—Not to any appreciable extent.

Sri S. SRINIVASA IYENGAR.—It was one-third.

11-30 A.M.

Sri H. SIDDAVEERAPPA.—Sir, the cost of tyres in the year 1949-50 was Rs. 230, in 1950-51 Rs. 235, whereas in 1951-52 Rs. 328; nearly 80 per cent more than we had in the year 1949-50. Then take tubes. In 1949-50 the cost was Rs. 22, whereas in 1951-52 it was Rs. 32.

Sri M. SHANKAR LINGE GOWDA (Nagamangala).—What about the cost of buses?

Sri H. SIDDAVEERAPPA.—You may have some patience. Sir, the values of these tyres and tubes have gone up by 42 per cent. Take the cost of spare parts. On an average this has increased by 150 per cent. Then, take the cost of petrol. It was Rs. 2-2-3 in 1949-50 per gallon, in 1950-51 it was Rs. 2-8-9 and in 1951-52 it was Rs. 2-9-9. That means an increase of 33 per cent. Now it is Rs. 2-12-0. I craved your indulgence to permit me to give these figures just because my Hon'ble friend's remarks levelled against this department are rather uncharitable. If my friend had these figures . . . .

Sri M. SHANKAR LINGE GOWDA.—Cost of buses and body?

Mr. SPEAKER.—Let not the Minister be disturbed.

Sri H. SIDDAVEERAPPA.—Then a suggestion was made that by public auction we may dispose of these bus lines. Sir, it is not a useful suggestion in my humble opinion. It is for this reason: the Law Department have thoroughly examined it and have come to the conclusion that such a kind of whole-sale auction of lines may not be altogether legal. Anyhow, Sir, I may say, I shall get it further examined, not with a view of putting into practice or translating the idea of my friend into practice, but whether the suggestion is really worth considering and whether it is legal. In this respect I can only say that the Law Department have tendered their advice that it is not altogether correct or legal to auction the lines.

Sri S. SRINIVASA IYENGAR.—Is it correct to over-crowd roads?

Sri H. SIDDAVEERAPPA.—Just one minute. So far as this is concerned, you must thank the Government, for all these years we were very liberal. As a matter of fact, not only the Government had got. . . . .

Sri P. R. RAMAIYA (Basavangudi).—On a point of order. The Hon'ble Member will have to address the Chair and not address the Members.

Sri H. SIDDAVEERAPPA.—Sir, I addressed the other Members only through you (laughter). My Hon'ble friend was saying about over-crowding. Over-crowding was a thing of the past. Now, we have given a number of lines. As a matter of fact, whoever asked for it, has not been denied by the Government. Not only over-crowding has been minimised, but to some extent, let it be said to the credit of Government, by its liberal policy in the matter of issuing licenses, the Government are also getting more revenue by way of cess, etc.

Sri S. SRINIVASA IYENGAR.—I said not of over-crowding of buses, but over-crowding the road.

Sri H. SIDDAVEERAPPA.—I may say, it is largely a question of demand and supply. There cannot be a hard and fast rule with regard to these things.

Sri M. SHANKAR LINGE GOWDA.—Cost of the bus and the body?

Mr. SPEAKER.—He has stated that the investment comes to nearly 27 lakhs.

Sri M. SHANKAR LINGE GOWDA.—The Hon'ble Minister talks about tyres and tubes and other things but not of cost of buses and bodies.

Mr. SPEAKER.—That is so far as the recurring expenditure is concerned.

Sri H. SIDDAVEERAPPA.—Then, the other point raised about this was the huge establishment charge. I may say, the Government have kept a very watchful and close eye with regard to that and I may assure this Hon'ble House that whenever they feel that the

establishment charges are unduly heavy, they will not hesitate to apply their are wherever necessary.

With regard to the travelling relief and facilities to the public, I do not know whether my friend has any interest in the bus . . .

Sri S. SRINIVASA IYENGAR.— I have no interest.

Sri H. SIDDAVEERAPPA.—Thank you. I wish to say, Sir, without fear of contradiction, that the facilities to the travelling public in Government Road Transport are infinitely better and higher when compared with the several private buses that are plying. Sir, my drivers have been often complaining to me that the Police have been very strict with regard to this over-crowding and other things and as a result of that, some of our drivers have been put to the necessity of undergoing a trial even in Court. That means, the Government have been very strict in this. As a matter of fact, it is not the question of rupees, annas and pies that counts in this. Of course, Government cannot run them on a loss. But, Government do not consider it only in that way. The primary consideration of Government Road Transport is to afford facilities to the travelling public and it is not the question of money. Of course, that is there, we must get some return for the money we put. But the primary and most important consideration is affording facilities to the travelling public. With a view to do that, we have allowed for short distances, standing facilities for the public. My friend suggested, there are no straps. Probably, on the day on which he travelled, he might not have found it. If he kindly takes the trouble of writing to me, I shall remedy it and try to provide all facilities to the travelling public.

With regard to the monopoly, I may say, Government know that one of the most important reasons for the small income derived is that some of the private buses have been competing with us in some of the lines. Government are aware of that. The Government thought of, as a first measure, taking about 225 miles—as a small measure of course. There are cut motions and I am thankful to my friends for suggesting the course of action which the Government should take in this behalf. We have taken Mysore-Bangalore, Bangalore-K.G.F., Bangalore-Tumkur and Bangalore-Dodballapur lines. We have been thinking of it. Wherever we have got good traffic, wherever we have good roads, Government wanted to have 100 per cent monopoly, with a view to see that the reason for the small earning, as the Hon'ble Member puts it in his own words, is not allowed to continue further. The Government have thought of a system of 100 per cent monopoly.

Then, I may bring at this stage one other fact to the notice of this House. The Government had been thinking of having a Corporation in the State, more or less modelled on the Road Transport Act of 1950. That is a matter, Sir, that is under the active consideration of the Government. That will give us all the facilities we want with an estimated capital outlay of one crore of rupees, hoping that Government of India will have 50 per cent of the shares through their railways.

I am sure, Sir, that when this Act is applied to Mysore and when we are able to get what we want through that Corporation, many of the facilities which my Hon'ble friend suggested may be easily achieved and I am sure that will enable us to solve many of the transport problems that are now facing this country. I hope, with these few remarks, my friend Sri Srinivasa Iyengar is satisfied about the earnestness and the desire of Government to afford all the facilities to the travelling public and I am sure he will withdraw his cut motion.

Sri S. SRINIVASA IYENGAR.—I beg leave to withdraw my cut motion.

The cut motion was, by leave, withdrawn.

Mr. SPEAKER.—There is no other cut motion under this Demand.

Sri Mulka GOVINDA REDDY.—I oppose the Demand Sir.

Mr. SPEAKER.—We have only 50 minutes and we have so many demands still to cover. We will close this Demand by 12 of the Clock.

Janab J. MOHAMED IMAM.—I hope so.

Mr. SPEAKER.—So, no speech will exceed five minutes.

Janab J. MOHAMED IMAM.—Mr. Speaker, Sir, I am not going to make a lengthy speech on this subject. I feel it to be my duty to offer a few remarks, not by way of criticism but to see that this scheme is worked satisfactorily. The Home Minister claims that the scheme is working satisfactorily but I do not want to contradict it, because I am interested to see that the scheme is successful and that it satisfies the public needs and it gives all facilities and amenities. Sir, the scheme was started as a business concern not merely to cater to the public needs but to see that the State gets a substantial revenue through this scheme. We all thought that it will yield to the Government good revenue.

We also studied the schemes which then existed both in Travancore and Hyderabad. It was pointed out by those Governments that it was really profitable, and, if I remember correctly, the Road Transport Scheme in Hyderabad fetched a revenue of more than 12½ per cent. Similarly in Travancore, it fetched to the Government a good revenue. But, in the State of Mysore, after 4 years of working, we feel that the return is not as much as we expected it to be. Judging it with private enterprise—we know many private people have been running buses, and that they have also become very successful businessmen as bus owners—this scheme of Government is not giving us adequate return.

Sri T. MARIAPPA.—Not all of them; many of them have lost.

